ಸಂಪುಟ : 10 ಸಂಚಿಕೆ: 194 ಪುಟ : 4+2 ಬೆಲೆ: 3.00 ಬುಧವಾರ ಸೆಪ್ಟೆಂಬರ್ 10 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್


# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 10 Issue : 194 Pages : 4+2 Price : 3.00 Wednesday September 10 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಜಿಲ್ಲಾ ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ



■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ.ಪಾಟೀಲ ಅವರು ಗದಗ ಜಿಲ್ಲೆಯಲ್ಲಿ ಸೆಪ್ಟೆಂಬರ್ 10 ರಂದು ಪ್ರವಾಸ ಕೈಗೊಳ್ಳಲಿದ್ದು ವಿವರ ಇಂತಿದೆ.

ಸೆಪ್ಟೆಂಬರ್ 10 ರಂದು ಬೆಳಿಗ್ಗೆ 6.30 ಗಂಟೆಗೆ ಹುಬ್ಬಳ್ಳಿಯಿಂದ ರಸ್ತೆ ಮೂಲಕ ಹೊರಟು ಬೆಳಿಗ್ಗೆ 7.30 ಗಂಟೆಗೆ ಗದುಗಿಗೆ ಆಗಮಿಸುವರು. ಬೆಳಿಗ್ಗೆ 9.30 ಗಂಟೆಗೆ ಹುಲಕೋಟಿ ಕೃಷಿ ವಿಜ್ಞಾನ ಕೇಂದ್ರಕ್ಕೆ ಇಂಧನ ಸಚಿವರೊಂದಿಗೆ ಭೇಟಿ ನೀಡುವರು. ಬೆಳಿಗ್ಗೆ 10 ಗಂಟೆಗೆ ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಗೆ ಇಂಧನ ಸಚಿವರೊಂದಿಗೆ ಭೇಟಿ ನೀಡುವರು. ಬೆಳಿಗ್ಗೆ 10.30 ಗಂಟೆಗೆ ನಗರದ ಹುಬ್ಬಳ್ಳಿ ರಸ್ತೆಯಲ್ಲಿನ ಕೆಪಿಟಿಸಿಎಲ್, 220 ಸ್ಟೇಶನ್ ಆವರಣದಲ್ಲಿನ ಗದಗ ಜಿಲ್ಲಾ ಕೇಂದ್ರದ ಕಾರ್ಯ ಮತ್ತು ಪಾಲನಾ ವೃತ್ತ ಕಚೇರಿಯ ನೂತನ ಕಟ್ಟಡದ ಅಡಿಗಲ್ಲು ಸಮಾರಂಭದಲ್ಲಿ ಪಾಲ್ಗೊಳ್ಳುವರು. ಬೆಳಿಗ್ಗೆ 11.30 ಗಂಟೆಗೆ ಗದಗ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂಧನ ಸಚಿವರೊಂದಿಗೆ ಗದಗ ಜಿಲ್ಲೆಯ ಎಲ್ಲ ಚುನಾಯಿತ ಜನಪ್ರತಿನಿಧಿಗಳೊಂದಿಗೆ ಇಂಧನ ಇಲಾಖೆಯ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಸಂಜೆ 4.30 ಗಂಟೆಗೆ ಹುಲಕೋಟಿಯ 2023–24 ನೇ ಸಾಲಿನ ಆರ್.ಐ.ಡಿ.ಎಫ್ ಟ್ರಾಂಚ್ –29 ರ ಅಡಿ ನಿರ್ಮಾಣಗೊಂಡಿರುವ ನೂತನ ರೈತ ಸಂಪರ್ಕ ಕೇಂದ್ರದ ಗೋದಾಮು ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಸಂಜೆ 5 ಗಂಟೆಗೆ ಗದಗ ಬೆಟಗೇರಿಯ ಹೆಲ್ತ್ ಕ್ಯಾಂಪ್‌ದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಾಲ ನ್ಯಾಯ ಮಂಡಳಿ ▸▸ 4ನೇ ಪುಟಕ್ಕೆ

### ಬಸವ ಸಂಸ್ಕೃತಿ ಅಭಿಯಾನದ ಸಂವಾದ ಕಾರ್ಯಕ್ರಮದಲ್ಲಿ ಡಾ. ಬಸವಲಿಂಗ ಪಟ್ಟದೇವರು

# ಲಿಂಗಾಯತ ಸ್ವತಂತ್ರ ಧರ್ಮವಾಗಬೇಕಿದೆ

■ ವಿಜಯಸಾಕ್ಷಿ ಸುದ್ದಿ, ಗದಗ

ವೀರಶೈವ ಮತ್ತು ಲಿಂಗಾಯತ ಇವೆರಡೂ ಒಂದೇ. ಕರ್ನಾಟಕದಲ್ಲಿ ಇರುವವರೆಲ್ಲರೂ ಲಿಂಗಾಯತರೇ ಆಗಿದ್ದಾರೆ. ಆದರೆ ಜ್ಞಾನದ ಕೊರತೆಯಿಂದ ಕೆಲವರು ತಮ್ಮನ್ನು ತಾವು ವೀರಶೈವರು ಎಂದುಕೊಳ್ಳುತ್ತಿದ್ದಾರೆ ಎಂದು ಡಾ. ಬಸವಲಿಂಗ ಪಟ್ಟದೇವರು ಅಭಿಪ್ರಾಯಪಟ್ಟರು.

ಇಲ್ಲಿನ ತೋಂಟದಾರ್ಯ ಮಠದಲ್ಲಿ ಲಿಂಗಾಯತ ಮಠಾಧಿಪತಿಗಳ ಒಕ್ಕೂಟ ಹಾಗೂ ಸಮಸ್ತ ಬಸವಪರ ಸಂಘಟನೆಗಳ ಆಶ್ರಯದಲ್ಲಿ ಮಂಗಳವಾರ ನಡೆದ ಬಸವ ಸಂಸ್ಕೃತಿ ಅಭಿಯಾನದ ಸಂವಾದ ಕಾರ್ಯಕ್ರಮದಲ್ಲಿ ಅವರು ವಿದ್ಯಾರ್ಥಿಗಳ ಪ್ರಶ್ನೆಗೆ ಉತ್ತರಿಸಿ ಮಾತನಾಡಿದರು.




ವೀರಶೈವ ಎನ್ನುವುದು ಶೈವ ಧರ್ಮದ ಒಂದು ಶಾಖೆ. ಲಿಂಗಾಯತ ಧರ್ಮದಲ್ಲಿ 99 ಉಪ ಪಂಗಡಗಳಿವೆ. ಆ ಪಂಗಡಗಳಲ್ಲಿ ವೀರಶೈವವೂ ಒಂದು. ನಾಡಿನ 400ಕ್ಕೂ ಹೆಚ್ಚು ಮಠಾಧೀಶರು ನಾವೆಲ್ಲರೂ ಲಿಂಗಾಯತರು ಎಂದು ಒಪ್ಪಿಕೊಂಡಿದ್ದಾರೆ. ಲಿಂಗಾಯತ ಧರ್ಮವನ್ನು ಪ್ರತ್ಯೇಕ ಎಂದು ಗುರುತಿಸಲು ಹೋರಾಟ ನಡೆಯುತ್ತಿದೆ. ಇದರ ಮುಖ್ಯ ಕಾರಣ, ವೈದಿಕ ಧರ್ಮದ ಚಾತುರ್ವರ್ಣ ಪದ್ಧತಿಯಲ್ಲಿ ಇಲ್ಲದ ಸಮಾನತೆಯನ್ನು ಲಿಂಗಾಯತ ಧರ್ಮ ಪ್ರತಿಪಾದಿಸುತ್ತದೆ. ಬಸವಣ್ಣನವರು ಕೆಳವರ್ಗದ ಜನರಿಗೆ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ನೀಡಿದರು. ಹೆಣ್ಣು ಮತ್ತು ಗಂಡಿನ ನಡುವೆ ಯಾವುದೇ ಭೇದಭಾವವಿಲ್ಲ ಎಂದು ಅವರು ಸಾರಿದರು. ಈ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಕಾರಣಕ್ಕಾಗಿ ಲಿಂಗಾಯತ ಸ್ವತಂತ್ರ ಧರ್ಮವಾಗಬೇಕಿದೆ ಎಂದರು.

ಇಸ್ಲಾಂ ಧರ್ಮವನ್ನು ಪ್ರವಾದಿ ಮುಹಮ್ಮದ ಪೈಗಂಬರ್ ಪರಿಚಯಿಸಿದರು. ಕ್ರೈಸ್ತ ಧರ್ಮವನ್ನು ಜೀಸಸ್ ಸ್ಥಾಪಿಸಿದರು. ಅದೇ ರೀತಿ ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪನೆ ಮಾಡಿದರು. ಲಿಂಗಾಯತ ಧರ್ಮಕ್ಕೂ ಅದರದೇ ಆದ ಆಚರಣೆಗಳಿವೆ. ಹೀಗಾಗಿ ಆಯಾ ಧರ್ಮದವರು ತಮ್ಮ ತಮ್ಮ ಧರ್ಮವನ್ನು ಪಾಲನೆ ಮಾಡುತ್ತಾ ಸಹೋದರತೆಯಿಂದ ಬಾಳಬೇಕು ಎಂದು ನಿಜಗುಣಾನಂದ ಸ್ವಾಮೀಜಿ ಹೇಳಿದರು. ಸಮಾರಂಭದಲ್ಲಿ ಮಣಕವಾಡದ ಅಭಿನವ ಮೃತ್ಯುಂಜಯ ಸ್ವಾಮೀಜಿ, ಭೈರನಹಟ್ಟಿಯ ಶಾಂತಲಿಂಗ ಸ್ವಾಮೀಜಿ, ಚಂದ್ರಶೇಖರ ದೇವರು, ಮಾಜಿ ಸಚಿವ ಎಸ್.ಎಸ್. ಪಾಟೀಲ, ಮಾಜಿ ಶಾಸಕ ಡಿ.ಆರ್. ಪಾಟೀಲ, ಶಿವಕುಮಾರಗೌಡ ಪಾಟೀಲ, ಕೆ.ಎಸ್. ಚೆಟ್ಟಿ, ಶೇಖಣ್ಣ ಕವಳಿಕಾಯಿ, ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

> ಬಸವಣ್ಣನವರು ಪ್ರತಿಪಾದಿಸಿದ ಅಷ್ಟಾವರಣಗಳು ಎಂಟು ರಕ್ಷಾಕವಚಗಳು. ಇವು ನಮ್ಮ ಅವಗುಣಗಳನ್ನು ನಿವಾರಿಸಲು ಮತ್ತು ದೇಹವನ್ನು ರಕ್ಷಿಸಲು ಸಹಾಯ ಮಾಡುತ್ತವೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷಿ ಮತ್ತು ಮಂತ್ರ. ಬಸವಣ್ಣನವರ ಮತ್ತೊಂದು ಪ್ರಮುಖ ತತ್ವವೆಂದರೆ, 'ಕಾಯಕವೇ ಕೈಲಾಸ'. ಇದರರ್ಥ ನಾವು ಮಾಡುವ ಕೆಲಸದಲ್ಲಿ ಸಂತೋಷ, ತೃಪ್ತಿ ಮತ್ತು ಪ್ರಾಮಾಣಿಕತೆ ಇದ್ದರೆ, ಅದೇ ಕೈಲಾಸಕ್ಕೆ ಸಮಾನ. ಅವರು ಕೆಲಸವನ್ನು ಪೂಜೆಯೆಂದು ಭಾವಿಸಲು ಪ್ರೇರೇಪಿಸಿದರು.
>
> – ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ. ಸಾಣೆಹಳ್ಳಿ.

> ಬಸವಣ್ಣನವರ ಕೊಡುಗೆಗಳು ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅಗಾಧವಾಗಿವೆ. ಅವರು ಪ್ರಜಾಪ್ರಭುತ್ವದ ಕಲ್ಪನೆ ಕೊಟ್ಟವರು. ಸ್ತ್ರೀ ಶೋಷಣೆ, ಮೂಢನಂಬಿಕೆ ಮತ್ತು ಕಂದಾಚಾರಗಳನ್ನು ತೊಡೆದುಹಾಕಲು ಹೋರಾಡಿದರು. ಅವರು ಎಲ್ಲರಿಗೂ ಸಾಮಾಜಿಕ ನ್ಯಾಯವನ್ನು ತಂದರು. ಈ ಕಾರಣಕ್ಕಾಗಿ ಅವರನ್ನು ಕನ್ನಡಿಗರ ಸಾಂಸ್ಕೃತಿಕ ನಾಯಕ ಎಂದು ಘೋಷಿಸಲಾಗಿದೆ ಎಂದು ತೋಂಟ–ದಾರ್ಯ ಮಠದ ಸಿದ್ದರಾಮ ಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

### ಸೆ. 20ಕ್ಕೆ ಕುರುಬರ ಸಂಘದ ರಜತ ಮಹೋತ್ಸವ, ಫಕೀರಪ್ಪ ಹೆಬಸೂರರ ಅಭಿನಂದನಾ ಸಮಾರಂಭ

# ಸಿಎಂ ಸಿದ್ದರಾಮಯ್ಯರಂತೆ ಮತ್ತೊಬ್ಬರಿಲ್ಲ




> ಹಾಲುಮತ ಮಹಾಸಭಾದ ರಾಜ್ಯಾಧ್ಯಕ್ಷ ರುದ್ರಣ್ಣ ಗುಳಗುಳಿ ಮಾತನಾಡಿ, ಗದಗ ಜಿಲ್ಲೆಯಲ್ಲಿ ಕುರುಬ ಸಮಾಜವನ್ನು ಸಂಘಟಿಸಿ, ಶಾಶ್ವತ ನೆಲೆ ಕಲ್ಪಿಸಿ, ರಜತ ಮಹೋತ್ಸವ ಆಚರಿಸಲು ಕಾರಣೀಕರ್ತರಾಗಿರುವ ಹಿರಿಯರಾದ ಫಕೀರಪ್ಪ ಹೆಬಸೂರ ಅವರ ಸಾಧನೆ ಅವಿಸ್ಮರಣೀಯ. ಇದೇ ಸಂದರ್ಭದಲ್ಲಿ ಅವರ ಜೀವಮಾನ ಸಾಧನೆಯನ್ನು ಗುರುತಿಸಿ ಅಭಿನಂದನಾ ಸಮಾರಂಭವನ್ನು ಹಮ್ಮಿಕೊಂಡಿರುವುದು ಸೂಕ್ತವಾಗಿದೆ ಎಂದು ಹೇಳಿದರು.

■ ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಾ ಕುರುಬರ ಸಂಘದ ರಜತ ಮಹೋತ್ಸವ ಹಾಗೂ ಸಂಘಜೀವಿ ಫಕೀರಪ್ಪ ಹೆಬಸೂರ ಅವರ ಅಭಿನಂದನಾ ಸಮಾರಂಭವನ್ನು ಸೆ.20ರಂದು ನಗರದ ಕನಕ ಭವನದಲ್ಲಿ ಹಮ್ಮಿಕೊಳ್ಳಲು ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಗಿದೆ ಎಂದು ಮಾಜಿ ಶಾಸಕ ಹಾಗೂ ರಜತ ಮಹೋತ್ಸವ ಸಮಿತಿಯ ಗೌರವಾಧ್ಯಕ್ಷ ಡಿ.ಆರ್. ಪಾಟೀಲ ತಿಳಿಸಿದರು.

ನಗರದ ದೇವರಾಜ ಅರಸು ವಸತಿ ನಿಲಯದಲ್ಲಿ ಈ ಕುರಿತು ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಸಚಿವರು, ಗಣ್ಯರು ಭಾಗವಹಿಸುತ್ತಿರುವುದು ಹೆಮ್ಮೆಯ ಸಂಗತಿ. ಎಲ್ಲರೂ ಸಂಘಟಿತರಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಂತೆ ಮತ್ತೊಬ್ಬರಿಲ್ಲ. ಅವರು ಗದಗ ಜಿಲ್ಲೆಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಅಲ್ಲದೆ, ಕುರುಬರ ಸಂಘದ ರಜತ ಮಹೋತ್ಸವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಯಾಗಿ ಆಗಮಿಸುತ್ತಿರುವುದು ಕಾಕತಾಳೀಯವೂ ಆಗಿದೆ. ಗದುಗಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗನ ಹೆಸರಿನಲ್ಲಿ ಶಿಕ್ಷಣ ಸಂಸ್ಥೆ ಕಟ್ಟಿ ಸಾಕಷ್ಟು ಜನರಿಗೆ ಅನುಕೂಲ ಕಲ್ಪಿಸಿರುವುದು ಹೆಮ್ಮೆಯ ಸಂಗತಿ. ಅಲ್ಲದೆ, ಸಂಘಜೀವಿ ಪಕೀರಪ್ಪ ಹೆಬಸೂರ ಅವರ ಜೀವಮಾನ ಸಾಧನೆಯ ಕುರಿತು ಅಭಿನಂದನಾ ಗ್ರಂಥ ಹೊರಬರುತ್ತಿರುವದು ಸಂಭ್ರಮ ಇಮ್ಮಡಿಗೊಳಿಸಿದೆ. ಅವರು ಕುರುಬ ಸಮಾಜಕ್ಕೆ ಮಾತ್ರವಲ್ಲ, ಗದಗ ಜಿಲ್ಲೆಗೆ ದೊಡ್ಡ ಆಸ್ತಿಯಾಗಿದ್ದಾರೆ ಎಂದು ಹೇಳಿದರು.

ಜಿ.ಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ ಮಾತನಾಡಿ, ಈ ಕಾರ್ಯಕ್ರವನ್ನು ಅದ್ದೂರಿಯಾಗಿ ಆಚರಿಸಲು ಗದಗ ಜಿಲ್ಲೆ ಸೇರಿದಂತೆ ಅಖಂಡ ಧಾರವಾಡ ಜಿಲ್ಲೆಯಲ್ಲಿ ಹೆಚ್ಚು ಪ್ರಚಾರ ಮಾಡಿ ಜನರನ್ನು ಸಂಘಟಿಸೋಣ ಎಂದು ಹೇಳಿದರು.

ಗಣ್ಯ ಉದ್ಯಮಿ ಪ್ರಕಾಶ ಕರಿ ಮಾತನಾಡಿ, ಸಮಾಜದ ಈ ಕಾರ್ಯಕ್ರಮಕ್ಕೆ ನಾನೂ ಕೂಡ ತನು–ಮನದಿಂದ ಸಹಾಯ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು. ರಾಜ್ಯ ನಿರ್ದೇಶಕಿ ಚನ್ನಮ್ಮ ಹುಳಕಣ್ಣವರ ಮಾತನಾಡಿ, ಕಾರ್ಯಕ್ರಮದಲ್ಲಿ ಜಿಲ್ಲೆಯಾದ್ಯಂತ ಸಂಚರಿಸಿ ಮಹಿಳೆಯರನ್ನು ಸಂಘಟಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸೋಣ ಎಂದು ಹೇಳಿದರು. ▸▸ 3ನೇ ಪುಟಕ್ಕೆ

## ಹಿಂದೂಗಳ ಮೇಲಿನ ದೌರ್ಜನ್ಯ ಖಂಡನೀಯ

■ ವಿಜಯಸಾಕ್ಷಿ ಸುದ್ದಿ, ಗದಗ

ಗಣೇಶ ಮೂರ್ತಿಯ ಶಾಂತಿಯುತ ಮೆರವಣಿಗೆ ವೇಳೆ ಮದ್ದೂರಿನಲ್ಲಿ ಭಾನುವಾರ ರಾತ್ರಿ ಹಿಂದೂಗಳ ಮೇಲೆ ನಡೆದ ಕಲ್ಲು ತೂರಾಟವನ್ನು ಬಿಜೆಪಿ ಗದಗ ಜಿಲ್ಲಾಧ್ಯಕ್ಷ ರಾಜು ಕುರುಡಗಿ ಖಂಡಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮದ್ದೂರಿನಲ್ಲಿ ಮೆರವಣಿಗೆಯ ವೇಳೆ ಉದ್ದೇಶಪೂರ್ವಕವಾಗಿ ಹಿಂದೂಗಳ ಮೇಲೆ ಕಲ್ಲು ಎಸೆದು, ಮೆರವಣಿಗೆ ಬರುವಾಗ ಗಣೇಶ ಮೂರ್ತಿಯ ಮುಂದೆ ಉಗುಳುವದು ಅಕ್ಷಮ್ಯ ಅಪರಾಧ. ಗಲಭೆ ತಡೆಗಟ್ಟುವ ಯೋಗ್ಯತೆ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಇಲ್ಲವಾಗಿದೆ. ಗಣೇಶ ವಿಸರ್ಜನೆ ವೇಳೆ ಮುನ್ನೆಚ್ಚರಿಕೆ ವಹಿಸದಿರುವುದು ಈ ಘಟನೆಗೆ ಕಾರಣವಾಗಿದೆ. ಗಲಭೆಕೋರರ ಮೇಲೆ ಕ್ರಮ ಕೈಗೊಳ್ಳುವ ಬದಲು ಪೊಲೀಸರು ಅಮಾಯಕ ಗಣೇಶ ಭಕ್ತರ ಮೇಲೆ ಲಾಠಿ ಪ್ರಹಾರ ಮಾಡಿದ್ದಾರೆ. ಹಿಂದಿನ ಗಲಭೆ ಪ್ರಕರಣಗಳಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರದ ಮತಾಂಧ ಶಕ್ತಿಗಳಿಗೆ ಪ್ರೋತ್ಸಾಹ ಕೊಡುವ ಹಾಗೆ ನಡೆದುಕೊಂಡಿದ್ದರಿಂದಲೇ ಇಂತಹ ಕೃತ್ಯಗಳು ಮರುಕಳಿಸಿವೆ.



ಘಟನೆಯಲ್ಲಿ ಮಹಿಳೆಯರ ಮೇಲೆ ಲಾಠಿ ಚಾರ್ಜ್ ಮಾಡಿದ್ದು ಸಣ್ಣ ವಿಷಯವಲ್ಲ. ಈ ಎಲ್ಲ ಘಟನೆಗಳನ್ನು ನೋಡಿದರೆ ಮುಂಬರುವ ದಿನಮಾನಗಳಲ್ಲಿ ಕಾಂಗ್ರೆಸ್ ಪಕ್ಷ ಪತನವಾಗುವಲ್ಲಿ ಸಂದೇಹವಿಲ್ಲ ಎಂದಿದ್ದಾರೆ.

## ಉಚಿತ ಆರೋಗ್ಯ ತಪಾಸಣಾ ಶಿಬಿರ ಇಂದು

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿ ಕಲಾ ಭವನದಲ್ಲಿ ಸೆ.10ರಂದು ಬೆಳಿಗ್ಗೆ 9.30ಕ್ಕೆ ದಿ ರೂರಲ್ ಮೆಡಿಕಲ್ ಸರ್ವಿಸ್ ಸೊಸೈಟಿಯ ಕೆ.ಎಚ್. ಪಾಟೀಲ್ ಆಸ್ಪತ್ರೆ, ರಿಸರ್ಚ್ ಇನ್‌ಸ್ಟಿಟ್ಯೂಟ್ ಹಾಗೂ ಸೆರೆಂಟಿಕ್ ಸಂಯುಕ್ತ ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಶಿಬಿರದಲ್ಲಿ ಡಾ. ಎಸ್.ಆರ್. ನಾಗನೂರ, ಡಾ. ವೇಮನ ಸಾಹುಕಾರ, ಡಾ. ಜಗದೀಶ ಗಡ್ಡೆಪ್ಪನವರ, ಡಾ. ಸವಿತಾ ಕುಲಕರ್ಣಿ, ಡಾ. ಕೃಷ್ಣರೆಡ್ಡಿ ನಾವಳ್ಳಿ, ಡಾ. ಗಿರೀಶ ನಾಗರಾಳ, ಡಾ. ವಿನಾಯಕ ಕುರಡಗಿ, ಡಾ. ಜಿತೇಂದ್ರ ಮುಗಳಿ, ಡಾ. ಧರಣೇಂದ್ರ ಎನ್.ಶಂಕರದ, ಡಾ. ವಿನಾಯಕ ಪಂಚಗಾರ ಭಾಗವಹಿಸುವರೆಂದು ಡಾ. ಎಸ್.ಸಿ. ಚವಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯಲ್ಲಿ ಮಂಗಳಾ ತಾಪಸ್ಕರ್ ಅವರಿಗೆ ಸನ್ಮಾನ

## ಸರ್ಕಾರಿ ಶಾಲೆಗಳಿಂದ ವಿದ್ಯಾರ್ಥಿಗಳ ಅಭಿವೃದ್ಧಿ



■ ವಿಜಯಸಾಕ್ಷಿ ಸುದ್ದಿ, ಗದಗ

ಸರ್ಕಾರಿ ಶಾಲೆಗಳಲ್ಲಿ ಎಲ್ಲ ವರ್ಗದ ಮಕ್ಕಳು ಅಧ್ಯಯನ ಮಾಡುತ್ತಿರುವುದರಿಂದ ಜೀವನದ ಪರಿಪೂರ್ಣ ಪಾಠವನ್ನು ವಿದ್ಯಾರ್ಥಿಗಳು ಇಲ್ಲಿ ಅರಿತುಕೊಳ್ಳುತ್ತಾರೆ. ಜೊತೆಗೆ ಸರ್ಕಾರಿ ಶಾಲೆಗಳ ಮಕ್ಕಳಿಗೆ ವಿಶೇಷ ಕಾಳಜಿ ವಹಿಸಿ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಹೀಗಾಗಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿ ಸರ್ಕಾರಿ ಶಾಲೆಯಿಂದ ಮಾತ್ರ ಸಾಧ್ಯ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕಿ (ಅಭಿವೃದ್ಧಿ) ಮಂಗಳಾ ತಾಪಸ್ಕರ್ ಅಭಿಪ್ರಾಯಪಟ್ಟರು.

ಅವರು ಸಭಾಪತಿ ಬಸವರಾಜ ಹೊರಟ್ಟಿ ದಂಪತಿಗಳು ದತ್ತು ಪಡೆದ ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯಲ್ಲಿ ಉಪನಿರ್ದೇಶಕಿಯಾಗಿ ಬಡ್ತಿ ಹೊಂದಿದ ನಿಮಿತ್ತ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಪ್ರಾಥಮಿಕ, ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗಾಗಿ ಹಲವಾರು ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಿ ಅವರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಕಳೆದ ದಶಕದಿಂದ ಇತ್ತೀಚೆಗೆ ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿದೆ. ಖಾಸಗಿ ▸▸ 3ನೇ ಪುಟಕ್ಕೆ

> ಅಧ್ಯಕ್ಷತೆ ವಹಿಸಿದ್ದ ಪ್ರಭಾರಿ ಮುಖ್ಯೋಪಾಧ್ಯಾಯರಾದ ಜಯಲಕ್ಷ್ಮೀ ಅಣ್ಣಿಗೇರಿ ಮಂಗಳಾ ತಾಪಸ್ಕರ್ ಅವರ ಶಿಕ್ಷಣಪರ ಕಾಳಜಿ ಶಿಕ್ಷಕರ ಬಗ್ಗೆ, ಮಕ್ಕಳ ಬಗ್ಗೆ, ಅವರಲ್ಲಿರುವ ವಿಶೇಷ ಪ್ರೀತಿ, ಮಮತೆಯ ಕುರಿತು ಮಾತನಾಡಿ, ಅವರ ಅಧಿಕಾರಾವಧಿಯಲ್ಲಿ ಗದಗ ಜಿಲ್ಲೆ ಶೈಕ್ಷಣಿಕವಾಗಿ ಇನ್ನಷ್ಟು ಪ್ರಗತಿ ಹೊಂದಲಿ ಎಂದರು.

### ತಾಲೂಕಾ ಕಸಾಪ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ದಿ ಆರ್.ಎಫ್. ಪುರಾಣಿಕಮಠರ ಸ್ಮರಣೆ

# ರಂಗಭೂಮಿಗೆ ಪುರಾಣಿಕಮಠರ ಕೊಡುಗೆ ಅಪಾರ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಈ ಭಾಗದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಿ ಆರ್.ಎಫ್. ಪುರಾಣಿಕಮಠರ ಹೆಸರು ಚಿರಸ್ಥಾಯಿಯಾಗಿದ್ದು, ಜೀವನದುದ್ದಕ್ಕೂ ವೃತ್ತಿರಂಗಭೂಮಿ, ಸಿನಿಮಾ ಪ್ರದರ್ಶನ, ಸಮಾಜ ಸೇವೆ ಮುಂತಾದ ಸೇವಾ ಕಾರ್ಯಗಳಲ್ಲಿ ತಮ್ಮನ್ನು ಅರ್ಪಿಸಿಕೊಂಡಿದ್ದರು ಎಂದು ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ ಅಭಿಪ್ರಾಯಪಟ್ಟರು.

ಅವರು ಲಕ್ಷ್ಮೇಶ್ವರ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಗಂಗಾಧರಯ್ಯ ಪುರಾಣಿಕಮಠ ಅವರ ಸ್ವಗೃಹದಲ್ಲಿ ಹಮ್ಮಿಕೊಳ್ಳಲಾಗಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.




ರಂಗಭೂಮಿ, ಸಿನೇಮಾ ಪ್ರಪಂಚದಲ್ಲಿ ಕನ್ನಡದ ವರನಟ ಡಾ. ರಾಜಕುಮಾರ, ಬಾಲಕೃಷ್ಣ, ಪಂಡರಿಬಾಯಿಯಂತ ಶ್ರೇಷ್ಠ ನಟ–ನಟಿಯರು ಇವರನ್ನು ಅತ್ಯಂತ ಗೌರವಭಾವದಿಂದ ಕಾಣುತ್ತಿದ್ದರು. ಇದಕ್ಕೆ ಅವರಲ್ಲಿದ್ದ ಸೇವಾ ಮನೋಭಾವ ಮತ್ತು ಕಲೆಗೆ ನೀಡುತ್ತಿದ್ದ ಗೌರವ ಕಾರಣವಾಗಿದೆ ಎಂದು ಹೇಳಿದರು.

'ವೃತ್ತಿ ರಂಗಭೂಮಿಗೆ ಆರ್.ಎಫ್. ಪುರಾಣಿಕಮಠ ಅವರ ಕೊಡುಗೆ' ವಿಷಯದ ಮೇಲೆ ಹಿರಿಯ ಸಾಹಿತಿ ಸಿ.ಜಿ. ಹಿರೇಮಠ ಉಪನ್ಯಾಸ ನೀಡಿ, 60–70ರ ದಶಕದಲ್ಲಿ ಈ ಭಾಗದಲ್ಲಿ ವೃತ್ತಿರಂಗ ಭೂಮಿಯನ್ನು ಅಭಿವೃದ್ಧಿಯೆಡೆಗೆ ಕೊಂಡೊಯ್ದ ಕೀರ್ತಿ ಆರ್.ಎಫ್. ಪುರಾಣಿಕಮಠರಿಗೆ ಸಲ್ಲುತ್ತದೆ. ರವಿ ಕಲಾ ನಾಟ್ಯ ಸಂಘ ಎಂಬ ನಾಟಕ ಕಂಪನಿಯ ಮಾಲಕರಾಗಿ, ಪೋಷಕರಾಗಿ ಕಲಾವಿದರನ್ನು ತಮ್ಮ ಮನೆಯ ಸದಸ್ಯರಂತೆ ನೋಡಿ–ಕೊಂಡು ಅವರ ಸಮಸ್ಯೆಗಳಿಗೆ ಸ್ಪಂದಿಸಿದವರು. ಉಮಾಶ್ರೀಯಂತಹ ಹಿರಿಯ ಕಲಾವಿದರು ಇವರನ್ನು ಇಂದಿಗೂ ನೆನೆಯುತ್ತಾರೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮಹಾಬಳೇಶ್ವರಪ್ಪ ಬೇವಿನಮರದ, ಬಿ.ಎಸ್. ಬಾಳೇಶ್ವರಮಠ ಮಾತನಾಡಿದರು. ಪ್ರತಿಮಾ ಮಹಾಜನಶೆಟ್ಟರ ಗೀತವಂದನ ಕಾರ್ಯಕ್ರಮ ನಡೆಸಿಕೊಟ್ಟರು. ಲಕ್ಷ್ಮೇಶ್ವರ ತಾಲೂಕಾ ಕಸಾಪ ಅಧ್ಯಕ್ಷ ಈಶ್ವರ ಮೆಡ್ಲೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಲ್ಲಯ್ಯ ಪುರಾಣಿಕಮಠ, ಜಗದೀಶ ಪುರಾಣಿಕಮಠ, ಗಂಗಾಧರಯ್ಯ ಪುರಾಣಿಕಮಠ, ವಾಗೀಶ ಪುರಾಣಿಕಮಠ ವೇದಿಕೆಯಲ್ಲಿದ್ದರು. ▸▸ 3ನೇ ಪುಟಕ್ಕೆ

> ದಿ ಆರ್.ಎಫ್. ಪುರಾಣಿಕಮಠ ಅವರ ಧರ್ಮಪತ್ನಿ ಪಾರ್ವತೆಮ್ಮ ಮಾತನಾಡಿ, ಜೀವನದುದ್ದಕ್ಕೂ ಕಲೆ, ಕಲಾವಿದರಿಗಾಗಿ ಮಿಡಿಯುವ ವ್ಯಕ್ತಿತ್ವ ಅವರದಾಗಿತ್ತು. ಕನ್ನಡ ಸಿನಿಮಾ ಕ್ಷೇತ್ರದ ಬಹುತೇಕ ಎಲ್ಲಾ ದೊಡ್ಡ ಕಲಾವಿದರನ್ನು ಲಕ್ಷ್ಮೇಶ್ವರಕ್ಕೆ ಕರೆಸಿ ಗೌರವವಿಸಿದ್ದರು ಎಂದು ತಮ್ಮ ಪತಿಯ ಸೇವೆಯನ್ನು ನೆನಪಿಸಿಕೊಂಡರು.

## ಸಂಪಾದಕೀಯ

# ಸಮೀಕ್ಷೆಗೆ ಶಿಕ್ಷಕರ ಬಳಕೆ: ಸವಾಲು ಮತ್ತು ಅನಿವಾರ್ಯತೆ

ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಆಯೋಗವು ಕೈಗೊಂಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಶಿಕ್ಷಕರನ್ನು ಬಳಸುವುದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ. ಶಿಕ್ಷಕರ ಪ್ರಮುಖ ಕರ್ತವ್ಯ ಬೋಧನೆ. ಆದರೆ, ಇಂತಹ ಸಮೀಕ್ಷೆಗಳಿಗೆ ಅವರನ್ನು ಬಳಸಿಕೊಳ್ಳುವುದರಿಂದ ವಿದ್ಯಾರ್ಥಿಗಳ ಕಲಿಕೆಗೆ ತೀವ್ರ ಅಡ್ಡಿ ಉಂಟಾಗುತ್ತದೆ ಎಂಬುದು ವಿರೋಧಿಗಳ ವಾದ.

ಈ ವಾದದಲ್ಲಿ ಸಂಪೂರ್ಣ ಸತ್ಯವಿದೆ. ಶಿಕ್ಷಣ ವ್ಯವಸ್ಥೆಯು ಈಗಾಗಲೇ ಹಲವು ಸವಾಲುಗಳನ್ನು ಎದುರಿಸುತ್ತಿರುವಾಗ, ಇಂತಹ ನಿರ್ಧಾರಗಳು ಮತ್ತಷ್ಟು ಸಮಸ್ಯೆಗಳನ್ನು ಸೃಷ್ಟಿಸುತ್ತವೆ ಎಂಬುದನ್ನು ಅಲ್ಲಗಳೆಯಲಾಗದು.

ಆದರೆ, ಈ ಸಮಸ್ಯೆಯನ್ನು ಇನ್ನೊಂದು ದೃಷ್ಟಿಕೋನದಿಂದಲೂ ನೋಡಬೇಕು. ಇಂತಹ ದೊಡ್ಡ ಪ್ರಮಾಣದ ಸಮೀಕ್ಷೆಗಳನ್ನು ನಡೆಸಲು ನುರಿತ ಮತ್ತು ವಿಶ್ವಾಸಾರ್ಹ ಮಾನವ ಸಂಪನ್ಮೂಲದ ಅವಶ್ಯಕತೆ ಇದೆ. ಶಿಕ್ಷಕರು ದೇಶದ ಅತಿ ದೊಡ್ಡ ಮತ್ತು ಸಂಘಟಿತ ಸಮೂಹಗಳಲ್ಲಿ ಒಬ್ಬರು. ಅವರಿಗೆ ಡೇಟಾ ಸಂಗ್ರಹಣೆ, ದಾಖಲೀಕರಣ ಹಾಗೂ ಸಂವಹನದ ಬಗ್ಗೆ ಉತ್ತಮ ತಿಳುವಳಿಕೆ ಇರುತ್ತದೆ.

ಇಂತಹ ಮಹತ್ವದ ಸಮೀಕ್ಷೆಯ ನಿಖರತೆ ಮತ್ತು ವಿಶ್ವಾಸಾರ್ಹತೆ ಕಾಪಾಡಲು ಶಿಕ್ಷಕರು ಸೂಕ್ತವಾದ ಆಯ್ಕೆ ಎಂದು ಸರ್ಕಾರ ಮತ್ತು ಆಯೋಗಗಳು ವಾದಿಸುತ್ತವೆ.

ಇನ್ನು, ಕೇವಲ ವಿರೋಧ ಮಾಡುವುದರಿಂದ ಈ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಬೋಧನೆಯ ಮಹತ್ವವನ್ನು ಕಡೆಗಣಿಸದೆ ಸಮೀಕ್ಷೆಯ ಉದ್ದೇಶವನ್ನು ಈಡೇರಿಸುವ ಮಾರ್ಗಗಳನ್ನು ಕಂಡುಕೊಳ್ಳುವುದು ಅಗತ್ಯವಾಗಿದೆ.

ಸಮೀಕ್ಷೆಯನ್ನು ರಜಾ ದಿನಗಳಲ್ಲಿ ನಡೆಸುವುದು ಒಂದು ಉತ್ತಮ ಪರ್ಯಾಯ. ಶಿಕ್ಷಕರು ರಜೆಗಳಲ್ಲಿ ಇರುವಾಗ ಸಮೀಕ್ಷೆ ನಡೆಸುವುದರಿಂದ ಬೋಧನೆಗೆ ಯಾವುದೇ ರೀತಿಯ ಅಡ್ಡಿ ಉಂಟಾಗುವುದಿಲ್ಲ. ಅಲ್ಲದೆ, ಅವರಿಗೆ ಸೂಕ್ತ ತರಬೇತಿ ನೀಡುವುದು ಮತ್ತು ಸಮೀಕ್ಷೆಗೆ ಬೇರೆ ಸರ್ಕಾರಿ ನೌಕರರನ್ನು, ಅಥವಾ ಸೂಕ್ತ ವೇತನದ ಮೇಲೆ ನಿರುದ್ಯೋಗಿ ಪದವೀಧರರನ್ನು ನೇಮಿಸಿಕೊಳ್ಳುವುದರ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಶಿಕ್ಷಣಕ್ಕೆ ಆದ್ಯತೆ ನೀಡುವುದು ಎಷ್ಟು ಮುಖ್ಯವೋ, ದೇಶದ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಗಳ ನಿಖರತೆಯೂ ಅಷ್ಟೇ ಮುಖ್ಯ. ಆದ್ದರಿಂದ, ಶಿಕ್ಷಣ ಮತ್ತು ಸಮೀಕ್ಷೆಯ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಸರ್ಕಾರದ ಮುಂದಿರುವ ಸವಾಲು. ಈ ಎರಡೂ ವಿಷಯಗಳು ಅಭಿವೃದ್ಧಿಗೆ ಪೂರಕವಾಗಿರಬೇಕೇ ಹೊರತು ಪರಸ್ಪರ ವಿರೋಧಾತ್ಮಕವಾಗಬಾರದು.

## ನಮ್ಮೂರಿನ ಜನರನ್ನು ಜಾತಿ, ಮತ, ಧರ್ಮಗಳನ್ನೆಲ್ಲ ಮೀರಿ ಒಂದೆಡೆ ಸೇರಿಸಿದ ಮಿರ್ಚಿ

# ಗದಗ ಬಿಸಿ ಮಿರ್ಚಿಯ ಕಥೆ



ಗದಗ ಮಿರ್ಚಿಗೆ ಆರು ದಶಕಗಳ ಇತಿಹಾಸವಿದೆ. 1965ರಲ್ಲಿ ತೋಂಟದಾರ್ಯ ಮಠದ ಬಳಿ ಮೊದಲು ಮಿರ್ಚಿ ಕೇಂದ್ರವನ್ನು ಪ್ರಾರಂಭಿಸಿದ ಮಿಣಜಿಗಿ ಕುಟುಂಬವನ್ನು ಗದಗ-ಬೆಟಗೇರಿಯ ಎಲ್ಲ ಹಿರಿಯ ನಾಗರಿಕರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರು ನೆನಪಿಸಿಕೊಳ್ಳುತ್ತಾರೆ. ಗದಗಕ್ಕೆ ಭೇಟಿ ನೀಡುವ ರಾಜ್ಯದೆಲ್ಲೆಡೆಯ ಅತಿಥಿಗಳು ಮಿರ್ಚಿ ಮತ್ತು ಬದನಿಕಾಯಿ ತಿನ್ನುವುದನ್ನು ತಪ್ಪಿಸಿಕೊಳ್ಳುವುದಿಲ್ಲ. 1965ರಲ್ಲಿ, ಅಂದಾನಪ್ಪ ಮಿಣಜಿಗಿ ಮತ್ತು ಅವರ ಪತ್ನಿ ಅನಸವ್ವ ಭಜ್ಜಿ ಕೇಂದ್ರವನ್ನು ಪ್ರಾರಂಭಿಸಿದರು ಮತ್ತು ಕೆಲವು ತಿಂಗಳುಗಳ ನಂತರ ಅವರು ಮಿರ್ಚಿಗಳನ್ನು ತಯಾರಿಸಲು ಪ್ರಾರಂಭಿಸಿದರು.

ಬದನಿಕಾಯಿ ಕೆಲವು ದಿನಗಳ ನಂತರ ಪ್ರಸಿದ್ಧವಾಯಿತು. ನಂತರ ರಾಘವೇಂದ್ರ ಕುಂದಾಪುರ ಮಿಣಜಿಗಿಯ ಮಿರ್ಚಿ ಕೇಂದ್ರದ ಪಕ್ಕದಲ್ಲಿ ಮತ್ತೊಂದು ಮಿರ್ಚಿ ಮತ್ತು ಬದನಿಕಾಯಿ ಕೇಂದ್ರವನ್ನು ಪ್ರಾರಂಭಿಸಿದರು. 80ರ ದಶಕದಲ್ಲಿ, ವಿಡಿಎಸ್ ಶಾಲೆಯ ಬಳಿಯ ವೆಂಕಟೇಶ್ ಮಿರ್ಚಿ ಕೇಂದ್ರವು ಪ್ರಸಿದ್ಧವಾಯಿತು.

80ರ ದಶಕದ ಉತ್ತರಾರ್ಧದಲ್ಲಿ ಅವರ ಮಗ ರಾಚಪ್ಪ ಮತ್ತು ಚೆನ್ನಪ್ಪ ಮಿಣಜಿಗಿ ಮಿರ್ಚಿ ಕೇಂದ್ರವನ್ನು ಮುನ್ನಡೆಸಿಕೊಂಡು ಹೋದರು. ಈ ಎಲ್ಲ ಮಿರ್ಚಿ ಅಂಗಡಿಯವರು ತಮ್ಮ ಗ್ರಾಹಕರ ಜೊತೆಗೆ ನಗುಮುಖದಿಂದ ವ್ಯವಹರಿಸುತ್ತಿದ್ದರು. ನಂತರ 2013ರವರೆಗೆ ಈ ಸಹೋದರರು ಮಿರ್ಚಿ ಬದನೆಕಾಯಿ ಮತ್ತು ಉಳ್ಳಾಗಡ್ಡಿ ಮಾಡುತ್ತಿದ್ದರು ಮತ್ತು ಕೆಲವು ವೈಯಕ್ತಿಕ ಕಾರಣಗಳ ನಂತರ ಅವರು ಅಂಗಡಿಯನ್ನು ತೊರೆದರು. ಈಗ ಅಂಗಡಿಗಳನ್ನು ಪುನರ್ನಿರ್ಮಿಸಲಾಗಿದೆ. ಇನ್ನೂ ಕೆಲವು ಮಿರ್ಚಿ ಕೇಂದ್ರಗಳು ಮಠದ ಮುಂದೆ ಇವೆ. ಈ ಸ್ಥಳವು ಇಂದಿಗೂ ಗದಗದಲ್ಲಿ ಮಿರ್ಚಿ ಮತ್ತು ಬದನೆಕಾಯಿಗೆ ಪ್ರಸಿದ್ಧವಾಗಿದೆ.

ಸುಪ್ರಸಿದ್ಧ ಗದುಗಿನ ಮಿರ್ಚಿ, ಬದನೆಕಾಯಿ ಎಲ್ಲರಿಗೂ ಅತಿ ಪ್ರಿಯವಾದ ಖಾದ್ಯ. ಬಿಸಿ ಬಿಸಿ ಮಿರ್ಚಿ ಮತ್ತು ಬದನೆಕಾಯಿ ಇದ್ದರೆ ಯಾವ ಫೈವ್‌ಸ್ಟಾರ್ ಹೋಟೆಲ್ ಊಟ ಕೊಟ್ಟರೂ ಬೇಡ ಅನ್ನುವಷ್ಟು ರುಚಿ. ಮಿರ್ಚಿ ಬದನೆಕಾಯಿ ತಿನ್ನುವಾಗ ಅದರ ಖಾರ ಹತ್ತಿದಾಗ ನೀರು ಕುಡಿಯದೇ ಖಾರವನ್ನು ಉಸ್... ಅನ್ನುತ್ತ ಅದರ ಮಜಾವನ್ನು ಅನುಭವಿಸುವ ಪರಿಯೇ ವಿಶಿಷ್ಟ. ಹೆಚ್ಚು ತಿಂದರೆ ಹೊಟ್ಟೆ ಕೆಡುತ್ತೆ ಎಂಬ ಅರಿವಿದ್ದರೂ ಮತ್ತೆ ಇವು ನಮಗೆಲ್ಲಿ ಸಿಗಬೇಕು ಎಂದು ಹೆಚ್ಚು ಮಿರ್ಚಿ ನುಂಗುವವರನ್ನು ಇಲ್ಲಿ ಸಾಮಾನ್ಯವಾಗಿ ಕಾಣಬಹುದು.

ಅಷ್ಟು ಖಾರವಾದ ಮಿರ್ಚಿ ತಿನ್ನುತ್ತಿದ್ದರೂ, ಬಾಯಲ್ಲಿ ಖಾರ ತಾಂಡವವಾಡುತ್ತಿದ್ದರೂ ಯಾರಾದರೂ ಭೇಟಿಯಾದಾಗ ತುಗೋರಿ ಮಿರ್ಚಿ ಅನ್ನುತ್ತಾರೆ. ಕೆಲವರಂತೂ ಇವತ್ತು ಮಿರ್ಚಿ ಬದನಿಕಾಯಿನೇ ನಮ್ಮ ಊಟ, ಬೇರೇನೂ ಬೇಡ ಎಂಬಂತೆ ತಿನ್ನುತ್ತಾರೆ. ಗಿರ್ಮಿಟ್ಟ ಬಾಯಲ್ಲಿ ಹಾಕಿಕೊಂಡು ಅದರಡಿಯಲ್ಲೇ ಮಿರ್ಚಿಯನ್ನು ಕಡಿಯುವ ತವಕ ಹಲವರದು. ನಂತರ ಮಿರ್ಚಿಯ ಖಾರ ಬಾಯಲ್ಲಿ ಪಸರಿಸತೊಡಗುವ ಮುಂಚೆಯೇ ಹಸಿ ಉಳ್ಳಾಗಡ್ಡಿಯನ್ನು ಅಗಿಯುವವರು.

ಇನ್ನೂ ಹೆಚ್ಚು ರಶ್ ಇದ್ದಾಗ ಹೋದರಂತೂ ಅಲ್ಲಿ ನೆರೆದಿದ್ದ ಜನರ ಬಾಯಲ್ಲಿ ಬರುವ ನೀರು, ತಲ್ಲಣದಿಂದ ಅವರೆಲ್ಲ ಬಿಸಿ ಮಿರ್ಚಿಗಾಗಿ ಕಾಯುತ್ತಾ ಯಾವಾಗ ಮಿರ್ಚಿ ಸಿಕ್ಕಿತೋ ಎಪ್ಪಾ ಎಂದು ಮನದಲ್ಲೇ ಉಸುರುತ್ತ ನಿಂತಿರುವ ಅವರ ಭಾವವನ್ನು ನೋಡಿದರೆ ಒಂದು ವೇಳೆ ಇವರಿಗೆ ಮಿರ್ಚಿ ಸಿಗದಿದ್ದರೆ ಬಹುಶಃ ಮನುಷ್ಯರನ್ನೇ ತಿನ್ನುತ್ತಾರೇನೋ ಎಂಬಂತೆ ಭಾಸವಾಗುತ್ತೆ! ನಮ್ಮೂರಿನ ಜನರನ್ನು ಜಾತಿ, ಮತ, ಧರ್ಮಗಳನ್ನೆಲ್ಲ ಮೀರಿ ಒಂದೆಡೆ ಸೇರಲು ಮುಖ್ಯ ಕಾರಣವಾದ ಈ ಮಿರ್ಚಿ ಬದನೆಕಾಯಿಗೆ ಒಂದು ಸಲಾಂ!

ಗದಗದ ಹಿರಿಯ ಬರಹಗಾರ ಗಣೇಶ್ ಪೈ, ಆ ದಿನಗಳು ಸ್ಮರಣೀಯ ಮತ್ತು ಈಗ ನಮಗೆ ಆ ಗುಣಮಟ್ಟದ ಮತ್ತು ರುಚಿಕರವಾದ ಮಿರ್ಚಿ ಸಿಗುವುದಿಲ್ಲ. ಅನೇಕ ಕನ್ನಡ ಸಿನಿಮಾ ನಟರು, ರಾಜಕೀಯ ನಾಯಕರಾದ ಅನಂತ್ ಕುಮಾರ್, ಸಂಸದ ಪ್ರಕಾಶ್ ಮತ್ತು ಇತರರು ಮಿರ್ಚಿಯನ್ನು ಸವಿದಿದ್ದಾರೆ. ಮಿಣಜಿಗಿ, ಕುಂದಾಪುರ ಮತ್ತು ವೆಂಕಟೇಶ್ ಎಂಬ ಮೂವರು ಗದಗ-ಬೆಟಗೇರಿಯಲ್ಲಿ ರುಚಿಕರವಾದ ಮಿರ್ಚಿ ಮತ್ತು ಬದನೆಕಾಯಿ ಮಾಡುವ ಕೌಶಲ್ಯದಿಂದ ಮಿರ್ಚಿಯನ್ನು ಪ್ರಸಿದ್ಧಗೊಳಿಸಿದರು. ಆ ದಿನಗಳಲ್ಲಿ ಮಹಿಳೆಯರಿಗೆ ಹೊರಗೆ ಹೋಗಲು ಅವಕಾಶವಿರಲಿಲ್ಲವಾದ್ದರಿಂದ ಹೊರಗೆ ಬಂದು ಮಿರ್ಚಿ ಮಾರಿದ ಅನಸಮ್ಮ ಅವರ ಧೈರ್ಯವನ್ನು ನಾವು ಪ್ರಶಂಸಿಸಬೇಕು ಎಂದು ನೆನಪಿಸಿಕೊಳ್ಳುತ್ತಾರೆ.

ಅನಸಮ್ಮ ಮತ್ತು ಅಂದಾನಪ್ಪ ಮಿಣಜಿಗಿ ಅವರ ಮೊಮ್ಮಗಳು ಜ್ಯೋತಿ ಹೇರಲಗಿ, ಶಾಲಾ ಶಿಕ್ಷಕಿ, ಅವರು ತಮ್ಮ ಅಜ್ಜನವರ ಬಗ್ಗೆ ಹೇಳಿದ್ದು ಹೀಗೆ, 'ನನ್ನ ಅಜ್ಜ ಬೇಳೆ ವಡೆಗಳೊಂದಿಗೆ ಪ್ರಾರಂಭಿಸಿದರು ಮತ್ತು ಕೆಲವು ತಿಂಗಳುಗಳ ನಂತರ ಮಿರ್ಚಿಯನ್ನು ಪ್ರಾರಂಭಿಸಿದರು. ಮಾಜಿ ಪ್ರಧಾನಿ ದೇವೆಗೌಡರು ಮಠಕ್ಕೆ ಬಂದಾಗ ಮಿರ್ಚಿಯ ರುಚಿ ನೋಡಿ, ಅದನ್ನು ಇಷ್ಟಪಟ್ಟರು ಎಂದು ನಮ್ಮ ಅಜ್ಜ ಹೇಳುತ್ತಿದ್ದರು. ಅನೇಕ ಜನರು ಇನ್ನೂ ನನ್ನ ಅಜ್ಜ, ಅಜ್ಜಿ, ಮತ್ತು ನನ್ನ ತಂದೆಯನ್ನು ರುಚಿಕರವಾದ ಮಿರ್ಚಿಗಾಗಿ ನೆನಪಿಸಿಕೊಳ್ಳುತ್ತಾರೆ.'

**- ರಘೋತ್ತಮ ಕೊಪ್ಪರ್.**
ಪತ್ರಕರ್ತರು, ಪಾರಂಪರಿಕ ವೈದ್ಯರು.

# ಶಿಕ್ಷಕರಿಂದ ಸಮರ್ಥ ಸಮಾಜ ನಿರ್ಮಾಣ

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಶಿಕ್ಷಕರಿಗೆಲ್ಲರಿಗೂ ಮಾದರಿಯಾದವರು ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರು. ಒಬ್ಬ ಶಿಕ್ಷಕ ಹೇಗಿರಬೇಕು ಎಂಬುದನ್ನು ತೋರಿಸಿದವರು ಅವರು. ಅವರ ಆದರ್ಶಗಳನ್ನು ನಾವೂ ಸಹ ಅಳವಡಿಸಿಕೊಂಡು ಜೀವನದಲ್ಲಿ ನೆಮ್ಮದಿಯನ್ನು ಕಾಣೋಣ ಎಂದು ಕೋಟುಮಚಗಿಯ ಶ್ರೀ ಸೋಮೇಶ್ವರ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ತ್ರಿವೇಣಿ ಕಂಬಾಳಿಮಠ ಹೇಳಿದರು.

ಗದಗ ಪಟ್ಟಣದ ರೋಟರಿ ಸೆಂಟ್ರಲ್‌ನಲ್ಲಿ ಆಚರಿಸಲಾದ ಶಿಕ್ಷಕ ದಿನಾಚರಣೆಯಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಒಬ್ಬ ಶಿಕ್ಷಕ ಒಂದು ಸಮರ್ಥ ಸಮಾಜವನ್ನು ನಿರ್ಮಾಣ ಮಾಡಬಲ್ಲ. ಮಕ್ಕಳು ಚಿಕ್ಕವರಿದ್ದಾಗಲೇ ನಾವು ನೀಡುವ ವಿದ್ಯೆ, ಸಂಸ್ಕಾರಗಳು ಅವನಲ್ಲಿ ಜೀವನಪರ್ಯಂತ ಮನೆ ಮಾಡಿರುತ್ತವೆ. ಹೀಗಾಗಿ ಶಿಕ್ಷಕರ ಜವಾಬ್ದಾರಿ ಬಹಳಷ್ಟಿದೆ ಎಂದರು.

ರೋಟರಿ ಸೆಂಟ್ರಲ್‌ನ ಅಧ್ಯಕ್ಷ ಚೇತನ ಅಂಗಡಿ ಮಾತನಾಡಿ, ಪ್ರತಿ ವರ್ಷ ನಮ್ಮ ಕ್ಲಬ್‌ನಲ್ಲಿ ನಾವು ಶಿಕ್ಷಕರನ್ನು ಗೌರವಿಸುವ ಕಾರ್ಯ ಮಾಡುತ್ತ ಬಂದಿದ್ದೇವೆ. ಸಮಾಜವನ್ನು ತಿದ್ದುವ, ಸಮಾಜವನ್ನು ಸರಿಯಾದ ದಾರಿಯಲ್ಲಿ ನಡೆಸುವ ಶಿಕ್ಷಕರನ್ನು ಗೌರವಿಸುವುದು ನಮ್ಮ ಹೆಮ್ಮೆ. ಏಕೆಂದರೆ ನಾವೆಲ್ಲರೂ ಶಿಕ್ಷಕರಿಂದಲೇ ಸಮಾಜದಲ್ಲಿ ಈ ಸ್ಥಾನಮಾನಗಳನ್ನು ಗಳಿಸಿದ್ದೇವೆ ಎಂದರು.

ಸಮಾರಂಭದಲ್ಲಿ ರೋಟರಿ ಸಂಸ್ಥೆಯ ಕಾರ್ಯದರ್ಶಿ ರೋ. ರಾಜಶೇಖರ ಉಮನಾಬಾದಿ, ಸೋಮೇಶ್ವರ ಶಿಕ್ಷಣ ಸಮಿತಿಯ ಕಾರ್ಯದರ್ಶಿ ಎಂ.ಬಿ. ರಮಾಣಿ, ಡಾ. ಎಲ್.ಎಸ್. ಗೌರಿ, ಡಾ. ಪ್ರಭು ಗಂಜಿಹಾಳ ಮುಂತಾದವರು ಪಾಲ್ಗೊಂಡಿದ್ದರು.



# ಗುರುವಿನ ಬಗೆಗಿನ ಕಾಳಜಿ ಅನನ್ಯ



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಭಾರತದಲ್ಲಿ ಗುರು-ಶಿಷ್ಯರ ಬಾಂಧವ್ಯಕ್ಕೆ ವಿಶೇಷವಾದ ಅರ್ಥವಿದೆ. ತಾಯಿ-ಮಗನ ಸಂಬಂಧವನ್ನು ಇದು ನೆನಪಿಸುತ್ತದೆ. ಎಂದೋ ಕಲಿತ ಶಿಷ್ಯರು ಕಲಿಸಿದ ಗುರುವನ್ನು ಹುಡುಕಿಕೊಂಡು ಬಂದು ಸನ್ಮಾನಿಸುತ್ತಿರುವುದು ಗುರುವಿನ ಬಗೆಗಿನ ಅನನ್ಯ ಪ್ರೀತಿಯನ್ನು ತೋರಿಸುತ್ತದೆ ಎಂದು ನಿವೃತ್ತ ಪ್ರಾಚಾರ್ಯ ಎ.ಎಫ್. ಹಿರೇಮಠ ಹೇಳಿದರು.

ಮುಂಡರಗಿಯ ಗಣ್ಯ ಕೃಷಿಕ ಈಶ್ವರಪ್ಪ ಹಂಚಿನಾಳ ಮತ್ತು ಅವರ ಸ್ನೇಹಿತರು ಶಿಕ್ಷಕರ ದಿನಾಚರಣೆ ಅಂಗವಾಗಿ ತಮ್ಮ ಮನೆಯಲ್ಲಿ ನೀಡಿದ ಸನ್ಮಾನವನ್ನು ಸ್ವೀಕರಿಸಿ ಅವರು ಮಾತನಾಡಿದರು

ಎಸ್‌ಎವಿವಿಪಿ ಸಮಿತಿಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ ಮಾತನಾಡಿ, ಸುಮಾರು ಆರು ದಶಕಗಳ ಹಿಂದೆ ಕಲಿಸಿದ ಗುರುಗಳನ್ನು ಗೌರವಿಸಲು ಬಂದಿರುವ ಈಶ್ವರಪ್ಪ ಹಂಚಿನಾಳ ಮತ್ತು ಸಂಗಡಿಗರು ನಿಜಕ್ಕೂ ಅಭಿನಂದನಾರ್ಹರು. ಪ್ರಾಚಾರ್ಯ ಹಿರೇಮಠರು ತಮ್ಮ ಶಿಸ್ತು ಮತ್ತು ಕರ್ತವ್ಯ ನಿಷ್ಠೆಯಿಂದ ಸಾವಿರಾರು ವಿದ್ಯಾರ್ಥಿಗಳ ಬಾಳಿನ ದಾರಿದೀಪವಾಗಿದ್ದಾರೆ ಎಂದರು.

ಈಶ್ವರಪ್ಪ ಹಂಚಿನಾಳ ಮಾತನಾಡಿ, ನಮ್ಮ ಗುರುಗಳಾದ ಹಿರೇಮಠರು ಅಂದು ಕಲಿಸಿದ ಇಂಗ್ಲೀಷ್ ಮತ್ತಿತರ ವಿಷಯಗಳು, ಸಂಸ್ಕಾರಗಳು ನಮ್ಮ ಮನದಲ್ಲಿ ಅಚ್ಚಳಿಯದೆ ಹಾಗೇ ಉಳಿದಿವೆ. ಆದ್ದರಿಂದ ಅವರನ್ನು ಗೌರವಿಸಬೇಕೆಂದು ಇಲ್ಲಿಗೆ ಬಂದು, ಅವರ ಆಶೀರ್ವಾದ ಪಡೆದು ಕೃತಾರ್ಥರಾಗಿದ್ದೇವೆ ಎಂದರು.

ನಿವೃತ್ತ ಶಿಕ್ಷಕ ಎಂ.ಎಸ್. ದಢೇಸೂರಮಠ ಮಾತನಾಡಿ, ತಂದೆ-ತಾಯಿ ನಮಗೆ ಜನ್ಮ ನೀಡುತ್ತಾರೆ. ಆದರೆ ಗುರುಗಳು ನಮ್ಮ ಜೀವನ ಪೂರ್ತಿ ನಮಗೆ ಬೆಳಕು ನೀಡುತ್ತಾರೆ ಎಂದರು.


ಕಾರ್ಯಕ್ರಮದಲ್ಲಿ ವಿ.ಕೆ. ಹಿರೇಮಠ, ಬಿ.ಆರ್. ಗಂಥದ, ಡಿ.ಎಸ್. ಅಳವಂಡಿ, ಬಿ.ಎಸ್. ಕಲ್ಮಠ, ಐ.ವಿ. ಹಂಚಿನಾಳ, ಡಾ. ಎಲ್.ಎಸ್. ಗೌರಿ, ಪ್ರಾಚಾರ್ಯ ಬಿ.ಎಚ್. ಬಂಡಿಹಾಳ ಮತ್ತಿತರರು ಉಪಸ್ಥಿತರಿದ್ದರು.

# ಮದ್ದೂರಿನ ಕಲ್ಲು ತೂರಾಟದಲ್ಲಿ ಹಿಂದುತ್ವ ಗುಂಪುಗಳೂ ಭಾಗಿಯಾಗಿವೆ: ಗೃಹ ಸಚಿವ ಪರಮೇಶ್ವರ

**■ವಿಜಯಸಾಕ್ಷಿ ಸುದ್ದಿ, ತುಮಕೂರು**

ಮದ್ದೂರಿನಲ್ಲಿ ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆಯ ವೇಳೆ ನಡೆದ ಕಲ್ಲು ತೂರಾಟದ ಘಟನೆಯಲ್ಲಿ ಹಿಂದುತ್ವ ಸಂಘಟನೆಗಳೂ ಭಾಗಿಯಾಗಿವೆ ಎಂದು ಕರ್ನಾಟಕ ಗೃಹ ಸಚಿವ ಜಿ. ಪರಮೇಶ್ವರ ಸೋಮವಾರ ಹೇಳಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ಪರಮೇಶ್ವರ, "ಹಿಂಸಾಚಾರಕ್ಕೆ ಸಂಬಂಧಿಸಿದಂತೆ 20ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ ಮತ್ತು ಅವರ ವಿಚಾರಣೆ ನಡೆಯುತ್ತಿದೆ. ಕಲ್ಲು ತೂರಾಟದಲ್ಲಿ ನಿಖರವಾಗಿ ಯಾರು ಭಾಗವಹಿಸಿದ್ದರು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

# ಸಮಸ್ಯೆಗಳ ವರದಿ ಸರಕಾರಕ್ಕೆ ಸಲ್ಲಿಕೆ



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶಿರಹಟ್ಟಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ 18 ವಾರ್ಡ್‌ಗಳಲ್ಲಿ ಈಗಾಗಲೇ ವಾರ್ಡ್ ಸಭೆ ನಡೆಸಲಾಗಿದ್ದು, ಸಂಬಂಧಿಸಿದ ವಾರ್ಡ್‌ನ ಸದಸ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕರೊಂದಿಗೆ ಚರ್ಚಿಸಿದ ಸಮಸ್ಯೆಗಳ ಪಟ್ಟಿಯನ್ನು ಫೋಟೋ ಮತ್ತು ವಿಡಿಯೋ ಸಮೇತ ಸರಕಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದು ಮುಖ್ಯಾಧಿಕಾರಿ ಸವಿತಾ ತಾಂಬ್ರೆ ಹೇಳಿದರು.

ಅವರು ಸೋಮವಾರ ಶಿರಹಟ್ಟಿಯ ಸಾಮರ್ಥ್ಯ ಸೌಧದಲ್ಲಿ ನಡೆದ ಪ.ಪಂ ವಿಶೇಷ ಸಾಮಾನ್ಯ ಸಭೆಯಲ್ಲಿ ಮಾತನಾಡಿದರು.

2025-26ನೇ ಸಾಲಿನ ಎಸ್‌ಎಫ್‌ಸಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ಅನುದಾನದಡಿಯಲ್ಲಿ ಶಿರಹಟ್ಟಿ ಪ.ಪಂ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿ ಜಮೀನಿನಲ್ಲಿ ಬೋರ್‌ವೆಲ್ ಕೊರೆಯಿಸುವುದಕ್ಕಾಗಿ 3 ಲಕ್ಷ, ಪ.ಪಂ ವ್ಯಾಪ್ತಿಯಲ್ಲಿ ಬ್ಲ್ಯಾಕ್ ಸ್ಪಾಟ್‌ಗಳಿಗೆ ಸಿಸಿ ಕ್ಯಾಮರಾ ಅಳವಡಿಸುವುದಕ್ಕಾಗಿ 12.80 ಲಕ್ಷ, ವಾ.ನಂ. 15ರ ಅಂಬೇಡ್ಕರ್ ಸಮುದಾಯ ಭವನದ ಹತ್ತಿರ ಸಿಸ್ಟರ್ನ್ ಟ್ಯಾಂಕ್ ಅಳವಡಿಸಿ ನೀರು ಸರಬರಾಜು ಮಾಡುವುದು 2.56 ಲಕ್ಷ ಹೀಗೆ ಒಟ್ಟು 29.32 ಲಕ್ಷ ರೂ.ಗಳಿಗೆ ಸಭೆಯಲ್ಲಿ ಅನುಮೋದನೆ ಪಡೆಯಲಾಯಿತು ಎಂದರು.

ಪ.ಪಂ ಅಧ್ಯಕ್ಷೆ ದೇವಕ್ಕ ಗುಡಿಮನಿ, ಉಪಾಧ್ಯಕ್ಷೆ ನೀಲವ್ವ ಹುಬ್ಬಳ್ಳಿ, ಸ್ಥಾಯಿ ಸಮಿತಿ ಅಧ್ಯಕ್ಷ ಹೊನ್ನಪ್ಪ ಶಿರಹಟ್ಟಿ, ಸದಸ್ಯರಾದ ಸಂದೀಪ ಕಪ್ಪತ್ತನವರ, ಅಶ್ರತಅಲಿ ಢಾಲಾಯತ, ಇಂಜಿನಿಯರ್ ಕಾಟೇವಾಲ್ ಮುಂತಾದವರು ಉಪಸ್ಥಿತರಿದ್ದರು.

# ಪಿರಮಿಡ್ ಧ್ಯಾನದಿಂದ ಹೊಸ ಚೈತನ್ಯ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ನಿತ್ಯದ ಒತ್ತಡದ ಬದುಕಿನಲ್ಲಿ ಪಿರಮಿಡ್ ಧ್ಯಾನ ಮತ್ತು ಸತ್ಸಂಗ ಅಳವಡಿಸಿಕೊಂಡರೆ ಮನಸ್ಸಿನ ಶುದ್ಧೀಕರಣದೊಂದಿಗೆ ದೇಹಕ್ಕೆ ಶಕ್ತಿ, ಹೊಸ ಚೈತನ್ಯ ಲಭಿಸುತ್ತದೆ ಎಂದು ಪಿರಮಿಡ್ ಯೋಗ ಸಾಧಕರಾದ ಬೆಂಗಳೂರಿನ ಸುರೇಶ ಕಲಬುರ್ಗಿ ಹೇಳಿದರು.

ಅವರು ಪಟ್ಟಣದ ಶ್ರೀ ರಂಭಾಪುರಿ ಕಲ್ಯಾಣ ಮಂಟಪದಲ್ಲಿ ಗದುಗಿನ ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟಿ, ಲಕ್ಷ್ಮೇಶ್ವರ ಧ್ಯಾನ ಪರಿವಾರದ ಸಹಯೋಗದಲ್ಲಿ ನಡೆದ ಧ್ಯಾನ ಪರಿಚಯ ಹಾಗೂ ಸತ್ಸಂಗ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪಿರಮಿಡ್ ಧ್ಯಾನದಿಂದ ಮನಸ್ಸಿನಲ್ಲಿನ ದ್ವೇಷ, ಕೋಪ, ಚಂಚಲತೆ, ನಕಾರಾತ್ಮಕ ಚಿಂತನೆಗಳು ತೊಲಗಿ ಶಾಂತ, ಶುದ್ಧ, ಸದ್ಭಾವನೆ ಪ್ರಾಪ್ತವಾಗುತ್ತದೆ. ಉಸಿರಾಟದೊಂದಿಗಿನ ಈ ಪಿರಮಿಡ್ ಧ್ಯಾನವು ದೇಹದೊಳಗಿನ ವಿಶ್ವಶಕ್ತಿಯನ್ನು ಉದ್ದೀಪನಗೊಳಿಸುತ್ತದೆ. ಒಟ್ಟಿನಲ್ಲಿ ಪಿರಮಿಡ್ ಧ್ಯಾನವು ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಯೋಗಕ್ಷೇಮವನ್ನು ಉತ್ತೇಜಿಸುವ ಒಂದು ಸಮಗ್ರ ಅಭ್ಯಾಸವಾಗಿದೆ. ಮಕ್ಕಳಿಂದ ಹಿರಿಯರವರೆಗೂ ದಿನದ ಯಾವುದೇ ಬಿಡುವಿನ ವೇಳೆಯಲ್ಲಿ ಈ ಧ್ಯಾನವನ್ನು ಅಳವಡಿಸಿಕೊಳ್ಳಬಹುದು ಎಂದರು.

ಹುಬ್ಬಳ್ಳಿಯ ಪಿರಮಿಡ್ ಮಾಸ್ಟರ್ ಪೂರ್ಣಿಮಾ ಆನೆಪ್ಪನವರ, ವಿದ್ಯಾರಾಣಿ ಕೂಬಳ್ಳಿ ಅವರು ಪಿರಮಿಡ್ ಧ್ಯಾನದ ಉಪಯುಕ್ತತೆ ಕುರಿತು ತಿಳಿಸಿದರು. ಪ್ರಾಸ್ತಾವಿಕ ಮಾತನಾಡಿದ ಧ್ಯಾನ ಪರಿವಾರದ ಸುಭಾಸ ಓದುನವರ, ಲಕ್ಷ್ಮೇಶ್ವರದಲ್ಲಿ ಪಿರಾಮಿಡ್ ಧ್ಯಾನ ಕೇಂದ್ರ ನಿರ್ಮಾಣವಾಗಲಿದ್ದು, ಸಾರ್ವಜನಿಕರು ಆರೋಗ್ಯಕರ, ಸಾತ್ವಿಕ ಜೀವನಕ್ಕಾಗಿ ಪಿರಮಿಡ್ ಧ್ಯಾನ ಮಾಡಬೇಕು ಎಂದರು.

ವಂಗಳಾದೇವಿ ಜಿ.ಮಹಾಂತಶೆಟ್ಟರ ಅಧ್ಯಕ್ಷತೆ ವಹಿಸಿದ್ದರು. ಕಸಾಪ ತಾಲೂಕಾಧ್ಯಕ್ಷ ಈಶ್ವರ ಮೆಡ್ಲೇರಿ, ಈರಣ್ಣ ಅಂಕಲಕೋಟಿ, ರವಿ ರಾಜನಾಳ, ಎಂ.ಕೆ. ಕಳ್ಳಿಮಠ ಮುಂತಾದವರಿದ್ದರು. ವಾಣಿ ಓದುನವರ, ಪಾರ್ವತಿ ಕಳ್ಳಿಮಠ ನಿರೂಪಿಸಿದರು.

## ಇನ್ನರ್‌ವ್ಹೀಲ್ ಕ್ಲಬ್‌ನಿಂದ ಬ್ಯಾಡ್‌ಟಚ್-ಗುಡ್‌ಟಚ್ ತರಬೇತಿ

# ಸ್ಪರ್ಶಗಳ ಬಗೆಗೆ ತಿಳುವಳಿಕೆ ಅವಶ್ಯಕ




**■ವಿಜಯಸಾಕ್ಷಿ ಸುದ್ದಿ, ಗದಗ**

ಸಮಾಜವು ಮಕ್ಕಳನ್ನು ಗೌರವಿಸಬೇಕು. ಮಕ್ಕಳ ಜೀವನದಲ್ಲಿ ಸುರಕ್ಷತೆ ಅತ್ಯಂತ ಮುಖ್ಯವಾಗಿದೆ. ಅಪಾಯಕಾರಿ ಘಟನೆಗಳಿಂದ ಮಕ್ಕಳು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸ್ಪರ್ಶಗಳ ಬಗೆಗೆ ತಿಳುವಳಿಕೆ ಅವಶ್ಯಕ ಎಂದು ಗದಗ-ಬೆಟಗೇರಿ ಇನ್ನರ್‌ವ್ಹೀಲ್ ಕ್ಲಬ್ ಅಧ್ಯಕ್ಷೆ ಅಶ್ವಿನಿ ಜಗತಾಪ ಹೇಳಿದರು.

ಅವರು ಗದಗ-ಬೆಟಗೇರಿ ಇನ್ನರ್‌ವ್ಹೀಲ್ ಕ್ಲಬ್‌ನಿಂದ ಗದುಗಿನ ಕೆ.ವಿ.ಎಸ್.ಆರ್ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿನಿಯರಿಗಾಗಿ ಹಮ್ಮಿಕೊಂಡಿದ್ದ ಗುಡ್‌ಟಚ್-ಬ್ಯಾಡ್‌ಟಚ್ ತರಬೇತಿ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಗುಡ್‌ಟಚ್ ಎಂದರೆ ಪ್ರೀತಿಯ ಸ್ಪರ್ಶ. ಭದ್ರತೆ ನೀಡುವ ಸ್ಪರ್ಶ. ಬ್ಯಾಡ್‌ಟಚ್ ಎಂದರೆ ಅಸಹಜ, ಭಯ ಹುಟ್ಟಿಸುವ ಸ್ಪರ್ಶವಾಗಿದ್ದು, ಅಂತಹ ಪರಿಸ್ಥಿತಿ ಎದುರಾದಲ್ಲಿ ಮಕ್ಕಳು ನೇರವಾಗಿ ಪಾಲಕರಿಗೆ ಅಥವಾ ಶಿಕ್ಷಕರಿಗೆ ತಿಳಿಸಬೇಕು ಎಂದರು. ಡಿಡ್ಸ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಫಕ್ಕಿರಮ್ಮ ಲಕ್ಕುಂಡಿ ಮಕ್ಕಳಿಗೆ ತರಬೇತಿ ನೀಡಿ, ಒಳ್ಳೆಯ ಸ್ಪರ್ಶವು ನಿಮಗೆ ಆರಾಮದಾಯಕ ಮತ್ತು ಸುರಕ್ಷಿತ ಭಾವನೆಯನ್ನು ನೀಡುತ್ತದೆ. ಸ್ಪರ್ಶವು ಸಾಮಾನ್ಯವಾಗಿ ವಿಶ್ವಾಸಾರ್ಹ ವ್ಯಕ್ತಿ, ಪೋಷಕರು, ಕುಟುಂಬ ಹಾಗೂ ಉತ್ತಮ ಸ್ನೇಹಿತರಿಂದ ನಮಗೆ ದೊರೆಯುತ್ತದೆ. ಹಣೆಯ ಮೇಲೆ ಮುತ್ತು ಕೊಡುವುದು, ತಲೆ ಸವರುವುದು, ಭುಜದ ಮೇಲೆ ಕೈ ಹಾಕುವುದು, ಹ್ಯಾಂಡ್ ಶೇಕ ಮಾಡುವುದು ಇತ್ಯಾದಿಯಾಗಿವೆ. ಕೆಟ್ಟ ಸ್ಪರ್ಶವು ಅಹಿತಕರ ಭಾವವನ್ನುಂಟು ಮಾಡುತ್ತದೆ. ದೇಹದ ಖಾಸಗಿ ಭಾಗಗಳನ್ನು ಅನುಚಿತವಾಗಿ ಸ್ಪರ್ಶಿಸುವಂತಹ ವಿಕೃತ ಭಾವನೆಗಳು ಇರುತ್ತವೆ. ನಿಮ್ಮ ದೇಹ ರಕ್ಷಣೆ ನಿಮ್ಮದೇ ಆಗಿರುವುದರಿಂದ ನೀವು ಜಾಗೃತಿ ವಹಿಸಬೇಕು ಎಂದರು.

ಶಾಲಾ ಮುಖ್ಯೋಪಾಧ್ಯಾಯಿನಿ ಪುಷ್ಪ ಬಿಸನಳ್ಳಿ ಮಾತನಾಡಿ, ಮಕ್ಕಳು ತಮ್ಮ ದೇಹದ ಬಗೆಗೆ ಕಾಳಜಿ ಹೊಂದಬೇಕು. ಹೆಣ್ಣು ಮಕ್ಕಳು ಸ್ವಚ್ಛತೆ ಕಡೆ ಗಮನ ಹರಿಸಿ ದೇಹವನ್ನು ರೋಗ ರುಜಿನಗಳಿಂದ ರಕ್ಷಿಸಿಕೊಳ್ಳಬೇಕು. ಅಪರಿಚಿತರೊಡನೆ ಸಲುಗೆ ಮಾಡದೇ ಯಾವಾಗಲೂ ವಿದ್ಯಾರ್ಥಿನಿಯರು ಗುಂಪು ಗುಂಪಾಗಿ ಓಡಾಡಬೇಕು ಎಂದರು. ಕ್ಲಬ್‌ನ ಕೋ-ಸಿಪಿಸಿಸಿ ಶಿಲ್ಪಾ ಅಕ್ಕಿ ಸ್ವಾಗತಿಸಿ ನಿರೂಪಿಸಿದರು. ಸಂಪನ್ಮೂಲ ವ್ಯಕ್ತಿ ಕವಿತಾ ಬೇಲೇರಿ ವಂದಿಸಿದರು.

> ಪ್ರಾಸ್ತಾವಿಕವಾಗಿ ಮಾತನಾಡಿದ ಕ್ಲಬ್‌ನ ಸಿಪಿಸಿಸಿ ಮೀನಾಕ್ಷಿ ಕೊರವನವರ, ಮಕ್ಕಳು ಕೆಲವೊಂದು ಸಾರಿ ಕೆಟ್ಟ ಪರಿಸ್ಥಿತಿಯಲ್ಲಿ ಸಿಕ್ಕರೆ ಆ ಅನುಭವವನ್ನು ಶಾಲೆಯಲ್ಲಿ ಹಂಚಿಕೊಂಡಾಗ ನಾವೆಲ್ಲರೂ ಅದರ ಗೌಪ್ಯತೆಯನ್ನು ಕಾಪಾಡಿ ಅದಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕು ಎಂದರು.

# ಮಂಡ್ಯ ಭಾಗದಲ್ಲಿ ಗಲಾಟೆಯ ಮೂಲಕವೇ ಬಿಜೆಪಿ ಅಸ್ತಿತ್ವಕ್ಕೆ ಬರಲು ಯತ್ನಿಸುತ್ತಿದೆ

**■ವಿಜಯಸಾಕ್ಷಿ ಸುದ್ದಿ, ಮಂಡ್ಯ**

ಮಂಡ್ಯ ಭಾಗದಲ್ಲಿ ಗಲಾಟೆಯ ಮೂಲಕವೇ ಬಿಜೆಪಿ ಅಸ್ತಿತ್ವಕ್ಕೆ ಬರಲು ಯತ್ನಿಸುತ್ತಿದ್ದು, ತನ್ನ ಮೈತ್ರಿಕೂಟದ ಜೆಡಿಎಸ್ ಪಕ್ಷಕ್ಕೆ ನೆಪ ಮಾತ್ರಕ್ಕೆ ಇರುವ ಜಾತ್ಯಾತೀತ ಎಂಬ ರೆಕ್ಕೆಗಳನ್ನೂ ಸಹ ಒಂದೊಂದಾಗಿ ಕಿತ್ತು ಹಾಕುವ ಕೆಲಸ ಮಾಡುತ್ತಿದೆ. ಬಹುಶಃ ಮುಂದೆ ಬಿಜೆಪಿಯೊಂದಿಗೆ ವಿಲೀನಗೊಳ್ಳಲು ಸಜ್ಜಾದಂತೆ ಇರುವ ಜೆಡಿಎಸ್ ನವರಿಗೂ ಅದೇ ಬೇಕಾದಂತೆ ಕಾಣುತ್ತಿದ್ದು, ಇವರ ಬಗ್ಗೆ ಜನ ಸಾಮಾನ್ಯರು ಬಹಳಷ್ಟು ಎಚ್ಚರಿಕೆಯಿಂದ ಇರಬೇಕು ಮತ್ತು ಸಮಾಜದಲ್ಲಿ ಇರಲೇಬೇಕಾದ ಸಂವಿಧಾನಿಕ ಐಕ್ಯತೆಯ ಮಹತ್ವವನ್ನು ಅರಿಯಬೇಕು ಎಂದು ಸಚಿವ ಹೆಚ್.ಸಿ ಮಹದೇವಪ್ಪ ಹೇಳಿದ್ದಾರೆ.

### ಕಾಮಗಾರಿ ಪೂರ್ಣಗೊಂಡರೂ ಅನುಪಯುಕ್ತವಾಗಿ ಉಳಿದ ವೈದ್ಯರ ವಸತಿ ಗೃಹಗಳ ಕಟ್ಟಡ

# ಕೂಡಿಬರದ ಉದ್ಘಾಟನೆಯ ಭಾಗ್ಯ

■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ಪಟ್ಟಣದ ಹಳೆಯ ಆಸ್ಪತ್ರೆ ಹಿಂಭಾಗದಲ್ಲಿ ನಿರ್ಮಿಸಿರುವ ನೂತನ ವೈದ್ಯರ ವಸತಿ ಗೃಹಗಳ ಕಟ್ಟಡ ಕಾಮಗಾರಿ ಪೂರ್ಣಗೊಂಡು ನಾಲ್ಕು ವರ್ಷ ಕಳೆದರೂ ಇನ್ನೂ ಉದ್ಘಾಟನೆಯ ಭಾಗ್ಯ ಕೂಡಿ ಬಂದಿಲ್ಲ.

2019–20 ಹಾಗೂ 2020–21ನೇ ಸಾಲಿನ ಕೆಕೆಆರ್‌ಡಿಬಿ ಹಾಗೂ ಡಿಎಂಎಫ್ ಯೋಜನೆಯಡಿ ಒಟ್ಟು 3 ಕೋಟಿ ರೂ ವೆಚ್ಚದಲ್ಲಿ 8 ವೈದ್ಯರ ವಸತಿ ಗೃಹಗಳು ನಿರ್ಮಾಣಗೊಂಡಿವೆ. ಕಾಮಗಾರಿ ಮುಕ್ತಾಯವಾಗಿ ಸುಮಾರು 4 ವರ್ಷವಾದರೂ ಕಟ್ಟಡ ಸದ್ಬಳಕೆಯಾಗದೆ ಅನುಪಯುಕ್ತವಾಗಿ ಉಳಿದಿದೆ.



ಈ ಕಟ್ಟಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ವಹಿಸಿಕೊಂಡಿದ್ದು, ಕಾಮಗಾರಿಯನ್ನು ಈಗಾಗಲೇ ಪೂರ್ಣಗೊಳಿಸಿದೆ. ಆದರೆ ಕಟ್ಟಡಕ್ಕೆ ವಿದ್ಯುತ್ ಮತ್ತು ನೀರಿನ ಸಂಪರ್ಕ ಕಲ್ಪಿಸುವುದು ಬಾಕಿ ಇದ್ದು, ಈ ಬಗ್ಗೆ ವೈದ್ಯರು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ.

ವೈದ್ಯರ ವಸತಿ ಗೃಹಗಳ ಕಟ್ಟಡಕ್ಕೆ ವಿದ್ಯುತ್ ಮತ್ತು ನೀರಿನ ಸಂಪರ್ಕ ಕಲ್ಪಿಸುವಂತೆ ಹಲವು ಬಾರಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದರೆ ಅಧಿಕಾರಿಗಳು ಮಾತ್ರ ಅನುದಾನದ ಕೊರತೆಯ ನೆಪ ಹೇಳಿ ಮುಂದೂಡುತ್ತಿದ್ದಾರೆ ಎಂದು ವೈದ್ಯರು ಹೇಳುತ್ತಾರೆ.

ವಸತಿ ಗೃಹಗಳು ಸುಸಜ್ಜಿತವಾಗಿ ನಿರ್ಮಾಗೊಂಡಿದ್ದು, ಹೊಸ ಕಟ್ಟಡದಲ್ಲಿ ವಿಶಾಲವಾದ ಹಾಲ್, ಕಿಚನ್, ಮೂರು ಬೆಡ್ ರೂಮ್‌ಗಳಿವೆ. ಕಟ್ಟಡಕ್ಕೆ ಅಳವಡಿಸಿರುವ ಕಿಟಕಿ ಗ್ಲಾಸ್‌ಗಳನ್ನು ಕಿಡಿಗೇಡಿಗಳು ಒಡೆದು ಹಾಕಿದ್ದು, ಕಟ್ಟಡದ ಸುತ್ತ ಗಿಡಗಂಟಿಗಳು ಬೆಳೆದು ನಿಂತು ಅನೈತಿಕ ಚಟುವಟಿಕೆಗಳ ತಾಣವಾಗಿದೆ. ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆಗೊಳಿಸುವ ಸರ್ಕಾರ ಮರಳಿ ಕಾಮಗಾರಿ ಎಲ್ಲಿಗೆ ಬಂದಿದೆ ಎಂದು ಕಣ್ಣು ಹಾಯಿಸುವುದಿಲ್ಲ. ಸ್ಥಳೀಯ ಆಡಳಿತವೂ ತಲೆ ಕೆಡಿಸಿಕೊಳ್ಳುವುದಿಲ್ಲ. ಇದರಿಂದ ಸಾರ್ವಜನಿಕರ ತೆರಿಗೆ ಹಣ ವ್ಯರ್ಥವಾದಂತಾಗುತ್ತದೆ.

ವಿಜಯನಗರ ಜಿಲ್ಲೆಯಲ್ಲಿಯೇ ಹರಪನಹಳ್ಳಿ ದೊಡ್ಡ ಹಾಗೂ ಹಿಂದುಳಿದ ತಾಲೂಕಾಗಿದ್ದು, ಇಲ್ಲಿ ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದಿಂದ ನಿತ್ಯ ಸಾವಿರಾರು ಜನರು ಸಾರ್ವಜನಿಕ ಆಸ್ಪತ್ರೆಗೆ ಬರುತ್ತಾರೆ. ಬರುವ ರೋಗಿಗಳಿಗೆ ಸೂಕ್ತ ಸಮಯಕ್ಕೆ ವೈದ್ಯರಿಂದ ಚಿಕಿತ್ಸೆ ಸಿಗಬೇಕು ಮತ್ತು ವೈದ್ಯರು ಸಮಯಕ್ಕೆ ಸರಿಯಾಗಿ ಹಾಜರಿರಬೇಕು ಎಂಬ ಕಾರಣಕ್ಕೆ ಕೇಂದ್ರ ಸ್ಥಾನದಲ್ಲಿ ವೈದ್ಯರ ವಸತಿ ಗೃಹಗಳನ್ನು ನಿರ್ಮಾಣ ಮಾಡಲಾಗಿದೆ. ಆದರೆ ವೈದ್ಯರು ಅಲ್ಲಿ ಉಳಿದುಕೊಳ್ಳುವ ಕಾಲ ಇನ್ನೂ ಕೂಡಿಬಂದಿಲ್ಲ.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬಹುತೇಕ ವೈದ್ಯರು ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ಇನ್ನೂ ಕೆಲವರು ದೂರದ ನಗರಗಳಿಂದ ಬಂದು ಹೋಗುತ್ತಾರೆ. ಆದರೆ ವೈದ್ಯರಿಗಾಗಿ ನಿರ್ಮಿಸಿರುವ ವಸತಿ ಗೃಹಗಳಲ್ಲಿ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಿ ವೈದ್ಯರಿಗೆ ಹಸ್ತಾಂತರಿಸಲು ಸಂಬಂಧಿಸಿದ ಅಧಿಕಾರಿಗಳು ಮೀನಾಮೇಷ ಎಣಿಸುತ್ತಿರುವುದು ಮಾತ್ರ ನಮ್ಮ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.



ವೈದ್ಯರ ವಸತಿ ಗೃಹಗಳ ಕಟ್ಟಡಕ್ಕೆ ವಿದ್ಯುತ್ ಮತ್ತು ನೀರಿನ ಸಂಪರ್ಕ ಕಲ್ಪಿಸುವುದು ಬಾಕಿ ಇದೆ. ಈ ಬಗ್ಗೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಶೀಘ್ರದಲ್ಲಿ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಿ ಕೊಡುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ.

**– ಡಾ.ದತ್ತಾತ್ರೇಯ ಪಿಸೆ.**
ಆಡಳಿತಾಧಿಕಾರಿ, ಸಾರ್ವಜನಿಕ ಆಸ್ಪತ್ರೆ ಹರಪನಹಳ್ಳಿ.



ಪಟ್ಟಣದಲ್ಲಿ ಸುಮಾರು 3 ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣಗೊಂಡಿರುವ ವೈದ್ಯರ ವಸತಿ ಗೃಹಗಳು ಪಾಳುಬಿದ್ದು ಅನೈತಿಕ ಚಟುವಟಿಕೆಯ ತಾಣವಾಗಿವೆ ಆದರೆ ಸ್ಥಳೀಯ ಆಡಳಿತ ಈ ಬಗ್ಗೆ ನಿರ್ಲಕ್ಷ್ಯವಹಿಸಿದೆ, ಕೂಡಲೇ ವಸತಿ ಗೃಹಳನ್ನು ವೈದ್ಯರಿಗೆ ಹಸ್ತಾಂತರಿಸಬೇಕು.

**– ಎಚ್.ಎಂ. ಸಂತೋಷ.**
ಪ್ರಗತಿಪರ ಹೋರಾಟಗಾರ.



ಹೊಸದಾಗಿ ಅಧಿಕಾರ ವಹಿಸಿಕೊಂಡಿದ್ದರಿಂದ ವೈದ್ಯರ ವಸತಿ ಗೃಹಗಳ ನಿರ್ಮಾಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ.

**– ರಾಘವೇಂದ್ರ.**
ಎಇಇ, ಲೋಕೋಪಯೋಗಿ ಇಲಾಖೆ ಹರಪನಹಳ್ಳಿ.

## ಬೆಳಗಾವಿ ವಿಭಾಗದ 7 ಜಿಲ್ಲೆಗಳಲ್ಲಿ ಸೆ. 11ರಿಂದ ನಡೆಯುವ ದಸರಾ ಕ್ರೀಡಾಕೂಟಗಳ ಮಾಹಿತಿ

■ವಿಜಯಸಾಕ್ಷಿ ಸುದ್ದಿ, ಗದಗ

ಬೆಳಗಾವಿ ವಿಭಾಗ ಮಟ್ಟದ ವಿವಿಧ ದಸರಾ ಕ್ರೀಡಾಕೂಟಗಳು ವಿವಿಧ ಜಿಲ್ಲೆಗಳಲ್ಲಿ ಜರುಗಲಿವೆ. ಗದಗ ಜಿಲ್ಲೆಯಲ್ಲಿ ಸೆ. 11ರಂದು ಬೆಳಿಗ್ಗೆ 8 ಗಂಟೆಗೆ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಫುಟ್ಬಾಲ್ ಪಂದ್ಯಾವಳಿ, ಮಹಾತ್ಮ ಗಾಂಧಿ ಹಾಕಿ ಕ್ರೀಡಾಂಗಣದಲ್ಲಿ ಹಾಕಿ ಪಂದ್ಯಾವಳಿಗಳು ಜರುಗಲಿವೆ.

ವಿಜಯಪುರ ಜಿಲ್ಲೆಯಲ್ಲಿ ಸೆ. 11ರಂದು ಬೆಳಿಗ್ಗೆ 8 ಗಂಟೆಯಿಂದ ವಿಜಯಪುರದ ಜಿಲ್ಲಾ ಕ್ರೀಡಾಂಗಣದಲ್ಲಿ ಅಥ್ಲೇಟಿಕ್ ಮತ್ತು ಜುಡೋ ಕ್ರೀಡೆಗಳು ಜರುಗಲಿವೆ. ಧಾರವಾಡ ಜಿಲ್ಲೆಯಲ್ಲಿ ಸೆ. 12ರಂದು ಬೆಳಿಗ್ಗೆ 8 ಗಂಟೆಗೆ ಬಾಲಮಾರುತಿ ಜಿಮ್ನಾಸ್ಟಿಕ್ ಸಂಸ್ಥೆಯಲ್ಲಿ ಜಿಮ್ನಾಸ್ಟಿಕ್, ವಿದ್ಯಾಗಿರಿಯ ಜನತಾ ಶಿಕ್ಷಣ ಸಂಸ್ಥೆಯ ಜೆ.ಎಸ್.ಎಸ್ ಕಾಲೇಜಿನಲ್ಲಿ ನೆಟ್‌ಬಾಲ್, ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಶೆಟಲ್ ಬ್ಯಾಡ್ಮಿಂಟನ್, ಟೆಕ್ವಾ–ಂಡೊ, ಟೇಬಲ್ ಟೆನ್ನಿಸ್ ಮತ್ತು ರಾಜ್ಯಾಧ್ಯಕ್ಷ ಪೆವಿಲಿಯನ್ ಟೆನ್ನಿಸ್ ಮೈದಾನದಲ್ಲಿ ಟೆನ್ನಿಸ್ ಪಂದ್ಯಾವಳಿ ನಡೆಯಲಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸೆ. 12ರಂದು ಬೆಳಿಗ್ಗೆ 9 ಗಂಟೆಯಿಂದ ಹಳಿಯಾಳದ ಕುಸ್ತಿ ಅಖಾಡದಲ್ಲಿ ಕುಸ್ತಿ ಪಂದ್ಯಾವಳಿ ಮತ್ತು ತಾಲೂಕು ಕ್ರೀಡಾಂಗಣ, ಹಳಿಯಾಳದಲ್ಲಿ ಖೋಖೋ ಪಂದ್ಯಾವಳಿ ನಡೆಯಲಿವೆ.

ಹಾವೇರಿ ಜಿಲ್ಲೆಯಲ್ಲಿ ಸೆ. 12ರಂದು ಬೆಳಿಗ್ಗೆ 8 ಗಂಟೆಯಿಂದ ಹೊಸಮನಿ ಸಿದ್ದಪ್ಪ ಜಿಲ್ಲಾ ಕ್ರೀಡಾಂಗಣದಲ್ಲಿ ಬಾಲ್ ಬ್ಯಾಡ್ಮಿಂಟನ್ ಮತ್ತು ಥ್ರೋಬಾಲ್ ಪಂದ್ಯಗಳು ಜರುಗಲಿವೆ. ಬಾಗಲಕೋಟೆ ಜಿಲ್ಲೆಯಲ್ಲಿ ಸೆ. 10ರಂದು ಬೆಳಿಗ್ಗೆ 8 ಗಂಟೆಯಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ವುಶು ಪಂದ್ಯಾವಳಿ ಮತ್ತು ಸೆ. 11ರಂದು ಬೆಳಿಗ್ಗೆ 8 ಗಂಟೆಯಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಯೋಗ ಕ್ರೀಡೆಗಳು ಜರುಗಲಿವೆ.

ಬೆಳಗಾವಿ ಜಿಲ್ಲೆಯಲ್ಲಿ ಸೆ. 11ರಂದು ಸಂಜೆ 4 ಗಂಟೆಯಿಂದ ರಾಯಭಾಗದ ವಾಲ್ಮೀಕಿ ಶಿಕ್ಷಣ ಸಂಸ್ಥೆಯ ದೈಹಿಕ ಶಿಕ್ಷಣ (ಬಿ.ಪಿ.ಇ.ಡಿ) ಮಹಾವಿದ್ಯಾಲಯ ಆಟದ ಮೈದಾನ, ಹಾರೋಗೇರಿಯಲ್ಲಿ ಹ್ಯಾಂಡ್‌ಬಾಲ್ ಪಂದ್ಯಾವಳಿ ಹಾಗೂ ಕಂಕನವಾಡಿಯ ಗಂಗೂಬಾಯಿ ಕರೆಮ್ಮದೇವಿ ದೇವಸ್ಥಾನದ ಆವರಣದಲ್ಲಿ ಕಬಡ್ಡಿ ಪಂದ್ಯಾವಳಿ ಜರುಗಲಿವೆ.

ಸೆ. 13 ಮತ್ತು 14 ರಂದು ಜಿಲ್ಲಾ ಕ್ರೀಡಾಂಗಣ, ಬೆಳಗಾವಿಯಲ್ಲಿ ವಾಲಿಬಾಲ್, ಬಾಸ್ಕೆಟ್ ಬಾಲ್, ಭಾರ ಎತ್ತುವ ಸ್ಪರ್ಧೆಗಳು ಜರುಗಲಿದ್ದು, ಸೆ.13ರಂದು ಬೆಳಿಗ್ಗೆ 9 ಗಂಟೆಗೆ ವರದಿ ಮಾಡಿಕೊಳ್ಳುವುದು. ಸೆ. 13ರಂದು ಬೆಳಿಗ್ಗೆ 9 ಗಂಟೆಯಿಂದ ಕೊಲ್ಲಾಪೂರ ಸರ್ಕಲ್ ಹತ್ತಿರದ ಬಾಕ್ಸಿಂಗ್ ಆಯ್ಕೆ ಒಳಾಂಗಣ ಕ್ರೀಡಾಂಗಣದಲ್ಲಿ ಜರುಗಲಿದ್ದು, ಬೆಳಿಗ್ಗೆ 9 ಗಂಟೆಗೆ ವರದಿ ಮಾಡಿಕೊಳ್ಳುವುದು. ಸೆ. 15ರಂದು ಬೆಳಿಗ್ಗೆ 10 ಗಂಟೆಯಿಂದ ಬೆಳಗಾವಿಯ ಅಶೋಕ ನಗರದ ಮಹಾನಗರ ಪಾಲಿಕೆ ಈಜುಕೊಳದಲ್ಲಿ ಈಜು ಪಂದ್ಯಾವಳಿಗಳು ಜರುಗಲಿವೆ.

ಬೆಳಗಾವಿ ವಿಭಾಗದ ವಿವಿಧ ಜಿಲ್ಲೆಗಳಲ್ಲಿ ಜರುಗುವ ವಿವಿಧ ಕ್ರೀಡೆಗಳ ಹೆಚ್ಚಿನ ಮಾಹಿತಿಗಾಗಿ ಬೆಳಗಾವಿ ಜಿಲ್ಲೆ–9353855076, ಗದಗ ಜಿಲ್ಲೆ–9036533909, ಧಾರವಾಡ ಜಿಲ್ಲೆ–9986250077, ಹಾವೇರಿ ಜಿಲ್ಲೆ–9945366724, ವಿಜಯಪುರ ಜಿಲ್ಲೆ–9480232655, ಕಾರವಾರ ಜಿಲ್ಲೆ–7899104699, ಬಾಗಲಕೋಟೆ ಜಿಲ್ಲೆ–9739722700 ಈ ಸಂಖ್ಯೆಗಳನ್ನು ಸಂಪರ್ಕಿಸಲು ಕೋರಲಾಗಿದೆ.

### ಪರಿಸರ ಸಂರಕ್ಷಣೆ ಜಾಗೃತಿ ಕಾರ್ಯಕ್ರಮದಲ್ಲಿ ಡಾ. ಪ್ರದೀಪ ಉಗಲಾಟದ ಅಭಿಮತ

## ಮರಗಳು ಜೀವಕುಲದ ಸಂಜೀವಿನಿ



ಚಿಂತಕಿ ಸುವರ್ಣ ವಸ್ತ್ರದ ಮಾತನಾಡಿ, ವಿಷಮುಕ್ತ ಶುದ್ಧ ಗಾಳಿಗಾಗಿ ಹಾಗೂ ಮುಂದಿನ ಪೀಳಿಗೆಯ ಆರೋಗ್ಯ ರಕ್ಷಣೆಗಾಗಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವ ಹೆಚ್ಚು ಗಿಡಗಳನ್ನು ನೆಡುವುದು, ಗಿಡಮರಗಳನ್ನು ಕಡಿಯದಂತೆ ರಕ್ಷಿಸುವುದು ಈ ಜವಾಬ್ದಾರಿಗಳನ್ನು ನಾವು ಒಬ್ಬೊಬ್ಬರಾಗಿಯೇ ನಿಭಾಯಿಸಬೇಕು. ಅಂದಾಗ ಉತ್ತಮ ಹಾಗೂ ಹಸಿರು ಪರಿಸರ ಉಳಿದೀತು ಎಂದರು.

■ವಿಜಯಸಾಕ್ಷಿ ಸುದ್ದಿ, ಗದಗ

ಕಾಡು ಬೆಳೆಸಿ, ನಾಡು ಉಳಿಸಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ನಮ್ಮ ಮನೆಯ ಸುತ್ತ ಮುತ್ತ ಹಾಗೂ ನಮಗೆ ಸೇರಿದ ಕೃಷಿ ಭೂಮಿಯಲ್ಲಿ ಸಾಧ್ಯವಾದಷ್ಟು ಹೆಚ್ಚು ಗಿಡಗಳನ್ನು ಬೆಳೆಸುವುದರೊಂದಿಗೆ ಪರಿಸರ ಸಂರಕ್ಷಣೆಗೆ ನಾವು ಮುಂದಾಗಬೇಕು ಎಂದು ಡಾ. ಪ್ರದೀಪ ಉಗಲಾಟದ ಹೇಳಿದರು.

ಅವರು ಗದಗ ಜಿಲ್ಲಾ ಶರಣೆ ಅಕ್ಕಮಹಾದೇವಿಯ ಕದಳಿಶ್ರೀ ವೇದಿಕೆಯಿಂದ ಜರುಗಿದ 'ಪರಿಸರ ಸಂರಕ್ಷಣೆ' ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ಬಿಸಿಲಿನ ತಾಪಮಾನ ಅತಿರೇಕವಾಗಿದ್ದು, ಜೀವ ಸಂಕುಲದ ಬದುಕಿಗೆ ತೊಂದರೆ–ಯಾಗಿದೆ. ಮರಗಳು ಜೀವಕುಲಕ್ಕೆ ಜೀವ ಸಂಜೀವಿನಿ ಆಮ್ಲಜನಕ ಒದಗಿಸುವ ಶಕ್ತಿ ವರ್ಧಕಗಳು. ಅದಕ್ಕಾಗಿ ಹೆಚ್ಚು ಗಿಡಗಳನ್ನು ನಾವು ನೆಡಬೇಕು. ಅವುಗಳು ನಾಶಗೊಳ್ಳದಂತೆ ಎಚ್ಚರಿಕೆ ವಹಿಸುವ ಮೂಲಕ ಪರಿಸರ ಸಂರಕ್ಷಣೆಯ ಜವಾಬ್ದಾರಿ ನಿಭಾಯಿಸಬೇಕು ಎಂದರು.

ಮುಖ್ಯ ಅತಿಥಿಗಳಾದ ಜ್ಯೋತಿ ದಾನಪ್ಪಗೌಡ್ರ ಮಾತನಾಡಿ, ಜೀವ ವೈವಿಧ್ಯದ ಉಳಿವಿಗಾಗಿ ನಾವೆಲ್ಲರೂ ಪಣ ತೊಡಬೇಕು. ಹಸಿರು ಪ್ರಕೃತಿಯು ನಮ್ಮ ಪೂರ್ವಜರು ನಮಗೆ ನೀಡಿದ ಅತ್ಯಮೂಲ್ಯ ಕೊಡುಗೆ. ನಾವು ನಮ್ಮ ಮಕ್ಕಳ ಸದೃಢ ಆರೋಗ್ಯಕ್ಕಾಗಿ ಸುಂದರ ಪ್ರಕೃತಿಯನ್ನು ಉಳಿಸಿ ಅದನ್ನು ಸಂರಕ್ಷಣೆ ಮಾಡೋಣ ಎಂದರು.

ಪ್ರಾಸ್ತಾವಿಕವಾಗಿ ಕವಿತಾ ದಂಡಿನ ಮಾತನಾಡಿ, ನಾವು ನಮ್ಮ ಪರಿಸರ ಹಾಗೂ ಭೂಮಿಯನ್ನು ನಮ್ಮ ಸ್ವಂತಕ್ಕಾಗಿ ದುರಪಯೋಗ ಮಾಡಿಕೊಳ್ಳುತ್ತಿದ್ದೇವೆ. ಅದು ನಮಗೆ ಸೇರಿದ್ದು ಎಂದು ನಾವು ಭಾವಿಸಿ ಅದನ್ನು ವಿನಾಶಗೊಳಿಸುತ್ತಿದ್ದೇವೆ. ನಮ್ಮ ಮುಂಬರುವ ಪೀಳಿಗೆಯು ಸುಂದರವಾದ ಜೀವನವನ್ನು ಕಟ್ಟಿಕೊಳ್ಳಲು ಉತ್ತಮ ಆರೋಗ್ಯಕ್ಕಾಗಿ, ಸಂತಸದಾಯಕ ಬದುಕಿಗಾಗಿ, ಹಸಿರು ಪರಿಸರ ನಿರ್ಮಾಣವೇ ನಮ್ಮೆಲ್ಲರ ಗುರಿಯಾಗಿರಲಿ ಎಂದರು

ರೇಖಾ ರೊಟ್ಟಿ ಮಾತನಾಡಿ, ಡಾ. ಪ್ರದೀಪ ಹಾಗೂ ನೀಲಾಂಬಿಕಾ ಉಗಲಾಟ ತಮ್ಮ ಸ್ವಂತ 11 ಎಕರೆ ಜಮೀನಿನಲ್ಲಿ ವಿವಿಧ ಗಿಡಮರಗಳನ್ನು ಬೆಳೆಸಿ ಮಾನವ ನಿರ್ಮಿತ ಕಾಡು ನಿರ್ಮಾಣ ಮಾಡಿದ್ದು ಇವರ ಸಾಧನೆ ನಮಗೆಲ್ಲ ಮಾದರಿಯಾಗಿದೆ ಎಂದರು.

ಶ್ರೀನಿಧಿ ಉಗಲಾಟ ಪರಿಸರ ಗೀತೆ ಹಾಡಿದರು, ಸಾಗರಿಕಾ ಅಕ್ಕಿ ಸ್ವಾಗತಿಸಿದರು. ಮೀನಾಕ್ಷಿ ಕೊರವನವರ ಪರಿಚಯಿಸಿದರು. ರೇಣುಕಾ ಪಾಟೀಲ ನಿರೂಪಿಸಿದರು. ಜಯಶ್ರೀ ಉಗಲಾಟ ವಂದಿಸಿದರು. ಕಾರ್ಯಕ್ರಮದಲ್ಲಿ ಜಯಶ್ರೀ ಗೌರಿಪುರ, ಜಯಲಕ್ಷ್ಮೀ ಉಗಲಾಟ, ಸ್ಮೃತಿ ಪಾಟೀಲ, ಸಂಗೀತಾ ಗೌಡರ, ಲಕ್ಷ್ಮೀ ಮುಂತಾದವರಿದ್ದರು.

## ರಂಗಭೂಮಿಗೆ ಪುರಾಣಿಕಮಠರ ಕೊಡುಗೆ ಅಪಾರ

▸▸ ಮೊದಲನೇ ಪುಟದಿಂದ

ಪ್ರಭಾವತಿ ಪುರಾಣಿಕಮಠ ಪ್ರಾರ್ಥಿಸಿದರು. ವಿಶ್ರಾಂತ ಶಿಕ್ಷಕ ಐ.ಎ. ಬಳಿಗಾರ ಸ್ವಾಗತಿಸಿದರು. ಕಾರ್ಯದರ್ಶಿ ಮಂಜುನಾಥ ಚಾಕಲಬ್ಬಿ ನಿರೂಪಿಸಿದರು. ಗಂಗಾಧರಯ್ಯ ಪುರಾಣಿಕಮಠ ವಂದಿಸಿದರು. ನಾಗರಾಜ ಮಜ್ಜಿಗುಡ್ಡ, ಎಸ್.ಬಿ. ಅಣ್ಣಿಗೇರಿ, ಪಿ.ಎಚ್. ಕೊಂಡಾಬಿಂಗಿ, ಎನ್.ಪಿ. ಪ್ಯಾಟಿಗೌಡ್ರ ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಚಂಬಣ್ಣ ಬಾಳಿಕಾಯಿ, ಮಲ್ಲಿಕಾರ್ಜುನ ಕಳಸಾಪುರ, ರಮೇಶ ನವಲೆ, ಎನ್.ಆರ್. ಸಾತಪುತೆ, ಸರೋಜಾ ಪುರಾಣಿಕಮಠ, ಸುನಂದ ಪುರಾಣಿಕಮಠ, ಸರೋಜಕ್ಕ ಬನ್ನೂರು, ಶಾರಕ್ಕ ಮಹಾಂತಶೆಟ್ಟರ, ಸುರೇಶ್ ಕೊಡ್ಲಿ, ನಿರ್ಮಲ ಅರಳಿ, ಮಾಲಾದೇವಿ ದಂದರಗಿ, ಪಾಪು ಬಾಳಿಹಳ್ಳಿಮಠ, ರತ್ನಾ ಕರ್ಕಿ, ಬೇಬಿ ರುದ್ರಶೆಟ್ಟರ, ಜೆ.ಡಿ. ಲಮಾಣಿ, ಮೃತ್ಯುಂಜಯ ಹಿರೇಮಠ, ಎಂ.ಕೆ. ಕಳ್ಳಿಮಠ, ಈರಣ್ಣ ಅಂಕಲಕೋಟಿ, ಸಚಿನ್ ಮಠದ, ರಾಜು ಉಮಚಗಿ, ಮುತ್ತುರಾಜ ಪೂಜಾರ, ಮುರುಳಿಧರ ಹುಬ್ಬಳ್ಳಿ ಮುಂತಾದವರಿದ್ದರು.

## ದೇವಸ್ಥಾನಗಳು ನಮ್ಮ ಸಂಸ್ಕೃತಿಯ ಪ್ರತೀಕ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಎಪಿಎಂಸಿ ಯಾರ್ಡ್‌ನಲ್ಲಿ ಕಳೆದ ತಿಂಗಳು ಲೋಕಾರ್ಪಣೆಗೊಂಡಿರುವ ಶ್ರೀ ಗಣೇಶ ದೇವಸ್ಥಾನಕ್ಕೆ ಮಂಗಳವಾರ ಗುಜರಾತ್‌ನ ಭರೂಚ್ ಜಿಲ್ಲೆಯ ಜಗಡಿಯಾ ಗ್ರಾಮದ ಶ್ರೀ ಕರ್ಷಣಿ ವಸುದೇವಾನಂದ ಮಹಾರಾಜ್‌ರು ಭೇಟಿ ನೀಡಿದರು.

ದೇವಸ್ಥಾನವನ್ನು ವೀಕ್ಷಿಸಿದ ಶ್ರೀಗಳು, ಕಟ್ಟಡ ವಾಸ್ತು ರೀತಿಯಲ್ಲಿ ಹಾಗೂ ಸುಂದರವಾಗಿ ನಿರ್ಮಾಣವಾಗಿರುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಮಿತಿ ಸದಸ್ಯರು ಶ್ರೀಗಳಿಗೆ ಗೌರವ ಸಲ್ಲಿಸಿದರು. ಈ ವೇಳೆ ಮಾತನಾಡಿದ ಅವರು, ದೇವಸ್ಥಾನಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿದ್ದು, ದೇವಸ್ಥಾನಗಳ ನಿರ್ಮಾಣ ಮಾಡುವದರೊಂದಿಗೆ ಅಲ್ಲಿ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯುವಂತೆ ನೋಡಿಕೊಳ್ಳುವದು ಅವಶ್ಯವಾಗಿದೆ. ದೇವಸ್ಥಾನಗಳು ನೆಮ್ಮದಿಯ ಕೇಂದ್ರಗಳಾಗಬೇಕು. ಅಲ್ಲಿ ಪೂಜೆ ಪುನಸ್ಕಾರಗಳು ಸಂಪ್ರದಾಯದಂತೆ ನಡೆದುಕೊಂಡು ಬರುವಂತೆ ಮಾಡುವದು ಅವಶ್ಯವಾಗಿದೆ. ಲಕ್ಷ್ಮೇಶ್ವರದ ವ್ಯಾಪಾರಸ್ಥರು ಸೇರಿ ಸುಂದರವಾಗಿ ಕಲ್ಲಿನ ದೇವಸ್ಥಾನ ನಿರ್ಮಾಣ ಮಾಡಿರುವದು ಉತ್ತಮ ಬೆಳವಣಿಗೆಯಾಗಿದ್ದು, ಇಲ್ಲಿ ನಿರಂತರವಾಗಿ ಕಾರ್ಯಚಟುವಟಿಕೆಗಳು ನಡೆದು ಇಲ್ಲಿನ ವ್ಯಾಪಾರ–ವಹಿವಾಟು ಉತ್ತಮವಾಗಿ ಬೆಳವಣಿಗೆ ಹೊಂದಲಿ ಎಂದು ಆಶೀರ್ವದಿಸಿದರು.

ನಂತರ ಶ್ರೀಗಳು ಹತ್ತಿರದ ಫೀನಿಕ್ಸ್ ಇಂಟರ್‌ನ್ಯಾಷನಲ್ ಶಾಲೆಗೆ ತೆರಳಿ ಅಲ್ಲಿನ ಪುಟಾಣಿ ಮಕ್ಕಳೊಂದಿಗೆ ಕೆಲ ಕಾಲ ಕಳೆದರು. ಈ ವೇಳೆ ಎಪಿಎಂಸಿ ವರ್ತಕರ ಮಂಡಳಿ ಕಾರ್ಯದರ್ಶಿ ಎಸ್.ಕೆ. ಕಾಳಪ್ಪನವರ, ಚಂಬಣ್ಣ ಬಾಳಿಕಾಯಿ, ರಾಜಣ್ಣ ಕೊಟಗಿ, ರಾಜಶೇಖರಯ್ಯ ಹಾಲೇವಾಡಿಮಠ, ಬಸವರಾಜ ಅಂಗಡಿ, ಅನಿಲ ಮುಳಗುಂದ, ಎಸ್.ಎಂ. ಕಗ್ಗಲಗೌಡ್ರ ಮುಂತಾದವರಿದ್ದರು.

## ಮಕ್ತುಮಹುಸೇನರಿಂದ ನಾಮಪತ್ರ ಸಲ್ಲಿಕೆ




■ವಿಜಯಸಾಕ್ಷಿ ಸುದ್ದಿ, ಗದಗ

ಗ'ದ'ಗ'–ಬ'ಟ'ಗ'ೇರಿ ಅಂಜುಮನ್ ಸಂಸ್ಥೆಯ 2025ನೇ ಸಾಲಿನ ಚುನಾವಣೆಯಲ್ಲಿ ಗದಗ ನಗರದ ಮಕ್ತುಮಹುಸೇನ್ ಖಾನ್ ಜಮಾದಾರ ತಮ್ಮ ಸ್ನೇಹಬಳಗದ ಜೊತೆ ಸ್ವತಂತ್ರ ಅಭ್ಯರ್ಥಿಯಾಗಿ ಮಂಗಳವಾರ ನಾಮಪತ್ರವನ್ನು ವಕ್ಫ್ ಇಲಾಖೆಯಲ್ಲಿ ಸಲ್ಲಿಸಿದರು.

ನಾಮಪತ್ರ ಸಲ್ಲಿಸಿ ಮಕ್ತುಮಹುಸೇನ ಖಾನ ಜಮಾದಾರ ಮಾತನಾಡಿ, ನಾನು ಆಯ್ಕೆಯಾದಲ್ಲಿ ಅಂಜುಮನ್ ಸಂಸ್ಥೆಯನ್ನು ಮಾದರಿ ಸಂಸ್ಥೆಯನ್ನಾಗಿ ಮಾಡುವೆ. ಮುಸ್ಲಿಂ ಸಮಾಜ ಬಾಂಧವರು ಶೈಕ್ಷಣಿಕ, ರಾಜಕೀಯ, ಸಾಮಾಜಿಕ, ಆರ್ಥಿಕವಾಗಿ ಸಬಲರಾಗಲು ಪ್ರಾಮಾಣಿಕವಾಗಿ ದುಡಿಯುವೆ ಎಂದು ಹೇಳಿದರು.

ನಾಮಪತ್ರ ಸಲ್ಲಿಕೆಯ ಸಂದರ್ಭದಲ್ಲಿ ಫಾರೂಕ ಹುಬ್ಬಳ್ಳಿ, ಮುಜಮಿಲ್ ಬಳ್ಳಾರಿ, ಮುನ್ನಾ ಕಾಗದಗಾರ, ಇಲಿಯಾಸ್ ಶಿರಹಟ್ಟಿ, ಅನ್ವರ್ ಶಿರಹಟ್ಟಿ, ಮಹಮ್ಮದಅಲಿ ಡಾಲಾಯತ್, ನೂರಅಹ್ಮದ ಕಟ್ಟಿಮನಿ, ಜಾಫರ ಡಾಲಾಯತ್, ಮಜಹರ ಪೀರಜಾದೆ, ಜಬ್ಬಾರಖಾನ ಜಮಾದಾರ, ಮಕ್ಬೂದ ಹೆಸರೂರ, ರಬ್ಬಾನಿ ಬನ್ನೂರ, ಶಹಬಾಜ ಮುಲ್ಲಾ, ಜಿಲಾನಿ ಬಳ್ಳಾರಿ ಮುಂತಾದವರು ಉಪಸ್ಥಿತರಿದ್ದರು.

## ಸರ್ಕಾರಿ ಶಾಲೆಗಳಿಂದ ವಿದ್ಯಾರ್ಥಿಗಳ ಅಭಿವೃದ್ಧಿ

▸▸ ಮೊದಲನೇ ಪುಟದಿಂದ

ಶಾಲೆಗಳನ್ನು ಮೀರಿ ಹಲವಾರು ಸರ್ಕಾರಿ ಶಾಲೆಗಳು ಉತ್ತಮ ಫಲಿತಾಂಶವನ್ನು ನೀಡುವ ಮೂಲಕ ಅಭಿವೃದ್ಧಿಯನ್ನು ಹೊಂದಿವೆ.

ಆ ನಿಟ್ಟಿನಲ್ಲಿ ಸಿದ್ಧಲಿಂಗ ನಗರದ ಸರ್ಕಾರಿ ಪ್ರೌಢಶಾಲೆ ಎಲ್ಲ ಮೂಲಭೂತ ಸೌಕರ್ಯಗಳನ್ನು ಹೊಂದುವ ಮೂಲಕ ಒಂದು ಮಾದರಿ ಶಾಲೆಯಾಗಿ ಬೆಳೆದು ನಿಂತಿದೆ ಎಂದರು.

ಈ ಸಂದರ್ಭದಲ್ಲಿ ಶಂಕ್ರಮ್ಮ ಆರ್.ಹಣಮಗೌಡ್ರು, ಮಂಜುಳಾ ಪಿ.ಸಾಮ್ರಾಣಿ, ಸುಮಂಗಲ ಎಂ.ಪತ್ತಾರ್, ಶಾರದಾ ಬಾಣದ, ಎಂ.ಐ. ಶಿವನಗೌಡ್ರು. ಶೋಭಾ ಎಸ್.ಗಾಳಿ, ರಮೇಶ್ ಬಸರಿ, ಸಾವಿತ್ರಿ ಎ.ಗದ್ದನಕೇರಿ, ಎನ್.ಆರ್. ಶಿರೋಳ್, ಸಬಿಯಾ ಯು.ಕುಷ್ಟಗಿ, ಗಂಗಾ ಎಂ.ಅಳವಂಡಿ, ಮಂಜುಳಾ ಟಿ, ಶಶಿಕಲಾ ಬಿ.ಗುಳೇದವರ, ಪದ್ಮಾ ವಿ.ದಾಸರ್, ಲಕ್ಷ್ಮಮ್ಮ ಮಾಳೋತ್ತರ್ ಮುಂತಾದವರು ಉಪಸ್ಥಿತರಿದ್ದರು. ಸಂಜೀವಿನಿ ಕೂಲಗುಡಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.



ಹುಲಕೋಟಿಯ ರೂರಲ್ ಮೆಡಿಕಲ್ ಸರ್ವಿಸ್ ಸೊಸೈಟಿ ನರ್ಸಿಂಗ್ ಸೈನ್ಸಸ್ ಕಾಲೇಜಿನಲ್ಲಿ ಮಾಜಿ ರಾಷ್ಟ್ರಪತಿ, ಅಪ್ರತಿಮ ಶಿಕ್ಷಕರಾಗಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ನಿಮಿತ್ತ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಕಾಲೇಜಿನ ಪ್ರಾಂಶುಪಾಲ ಡಾ. ಬಸಯ್ಯ ಹುಣಸಗಿಮಠ ಡಾ. ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

## ಸಿಎಂ ಸಿದ್ದರಾಮಯ್ಯರಂತೆ ಮತ್ತೊಬ್ಬರಿಲ್ಲ

▸▸ ಮೊದಲನೇ ಪುಟದಿಂದ

ರಜತ ಮಹೋತ್ಸವ ಸಮಿತಿಯ ಕಾರ್ಯದರ್ಶಿ ಶಶಿಧರ ರೊಳ್ಳಿ ಮಾತನಾಡಿ, ಕಾರ್ಯಕ್ರಮದ ಅಂಗವಾಗಿ ಯುವ ಘಟಕದ ನೇತೃತ್ವದಲ್ಲಿ ಕಾಗಿನೆಲೆಯಿಂದ ಗದುಗಿನವರೆಗೆ ಜ್ಯೋತಿ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಸೆ. 20ರಂದು ಗದುಗಿಗೆ ಜ್ಯೋತಿಯಾತ್ರೆ ಆಗಮನವಾಗಲಿದೆ. ಇದಕ್ಕೂ ಮುನ್ನ ಜಿಲ್ಲೆಯಾದ್ಯಂತ ಎಲ್ಲ ತಾಲ್ಲೂಕುಗಳಿಗೂ ಜ್ಯೋತಿಯಾತ್ರೆ ಸಂಚರಿಸಿ ಕಾರ್ಯಕ್ರಮದ ಕುರಿತು ಪ್ರಚಾರ ಮಾಡಲಿದೆ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಫಕೀರಪ್ಪ ಹೆಬಸೂರ ಮಾತನಾಡಿ, ಸಮಾಜಕ್ಕೆ ಒಳ್ಳೆಯನ್ನು ಮಾಡಿದರೆ ಸಮಾಜವು ನಮಗೆ ಒಳ್ಳೆಯದನ್ನೇ ಮಾಡುತ್ತದೆ ಎನ್ನುವುದಕ್ಕೆ ಸಮಾಜ ಬಾಂಧವವರು ನನ್ನನ್ನು ತುಂಬು ಹೃದಯದಿಂದ ಗೌರವಿಸುತ್ತಿರುವದು ನನಗೆ ಸಮಾಜವನ್ನು ಮುನ್ನಡೆಸಲು ಮತ್ತಷ್ಟು ಶಕ್ತಿ ತುಂಬಿದೆ ಎಂದರು.

ಈ ಸಂದರ್ಭದಲ್ಲಿ ಕುರುಬರ ಸಂಘದ ರಾಜ್ಯ ನಿರ್ದೇಶಕ ಕಳಕನಗೌಡ ಗೌಡ್ರ, ಹಿರಿಯರಾದ ಸೋಮಕಟ್ಟಿಮಠ, ಹಿರಿಯ ಶಿಕ್ಷಕರಾದ ಸುರೇಶ ಕೊಪ್ಪದ ಮುಂತಾದವರು ಉಪಸ್ಥಿತರಿದ್ದರು. ಎಸ್.ಎಸ್. ಕರಡಿ ಸ್ವಾಗತಿಸಿದರು. ನೀಲಕಂಠ ಮರಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ.ಬಿ. ಕಂಬಳಿ ವಂದಿಸಿದರು.

## ನಿಧನ

### ಬಸವರಾಜ ಹೊನ್ನುಂಗರದ



**ಲಕ್ಕುಂಡಿ:** ಇಲ್ಲಿಯ ಅನ್ನದಾನೀಶ್ವರ ಓಣಿಯ ನಿವಾಸಿ ಬಸವರಾಜ ವೀರಪ್ಪ ಹೊನ್ನುಂಗರದ (61) ಮಂಗಳವಾರ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ.

# ಶಿಕ್ಷಕರ ಸಮ್ಮೇಳನ ಸೆ.28, 29ಕ್ಕೆ



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಕಳಸಾಪೂರದ ಕಪ್ಪತ್ತಗಿರಿ ಫೌಂಡೇಷನ್ ವತಿಯಿಂದ ಸೆ. 28, 29ರಂದು ನಡೆಯಲಿರುವ ಶಿಕ್ಷಕರ ದಿನಾಚರಣೆ ಪ್ರಯುಕ್ತ ಗದಗ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ, ಕೃತಿ ಬಿಡುಗಡೆ ಹಾಗೂ ಎರಡು ದಿನಗಳ ರಾಜ್ಯ ಮಟ್ಟದ ವಿಚಾರ ಸಂಕಿರಣ ಆಯೋಜಿಸಲಾಗಿದೆ.

ತಮ್ಮ ಇಡೀ ಜೀವನವನ್ನೇ ಶಿಕ್ಷಣ ಕ್ಷೇತ್ರಕ್ಕೆ ಮೀಸಲಾಗಿಟ್ಟವರು, ಮಕ್ಕಳ ಬದುಕಿಗಾಗಿ ಹಗಲಿರುಳು ಶ್ರಮಿಸಿದವರು, ಶರಣ ಚಿಂತಕರು, ಸಾಹಿತಿಗಳೂ ಆದ ಡಾ. ಪಂಚಯ್ಯ ಹಿರೇಮಠ ಅವರು ಈ ಕಾರ್ಯಕ್ರಮದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಗ್ರಾಮದ ವಾಲ್ಮೀಕಿ ಸಮುದಾಯ ಭವನದಲ್ಲಿ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ಆಹ್ವಾನ ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕಳಸಾಪೂರ ಗ್ರಾಮದ ಹಿರಿಯರಾದ ಶರದ್‌ರಾವ್ ಹುಯಿಲಗೋಳ ಹಾಗೂ ಸಿ.ಬಿ. ಪಲ್ಲೇದ, ಕಾರ್ಯಕ್ರಮದ ಸರ್ವಾಧ್ಯಕ್ಷರಾಗಿ ಡಾ. ಪಂಚಯ್ಯ ಹಿರೇಮಠ ಆಯ್ಕೆಯಾಗಿರುವುದು ಕಾರ್ಯಕ್ರಮದ ತೂಕವನ್ನು ಹೆಚ್ಚಿಸಿದೆ ಎಂದರು.

ಈ ಸಂದರ್ಭದಲ್ಲಿ ಬಸವ ಕೇಂದ್ರದ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಖಂಡಮ್ಮನವರ, ಗ್ರಾಮದ ಹಿರಿಯರು, ಸಾಹಿತಿಗಳಾದ ಮಹಾಂತೇಶ ಬೇರಗಣ್ಣವರ ಉಪಸ್ಥಿತರಿದ್ದರು ಎಂದು ಕಪ್ಪತ್ತಗಿರಿ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷರಾದ ಚಂದ್ರಕಲಾ ಎಂ.ಇಟಗಿಮಠ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಇಂಧನ ಇಲಾಖೆಯ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್


# ಅಧಿಕಾರಿ-ಸಿಬ್ಬಂದಿಗಳ ನಡುವೆ ಸಮನ್ವಯವಿರಲಿ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ನೂತನ ರಾಜ್ಯ ಸರ್ಕಾರವು ಅಸ್ತಿತ್ವಕ್ಕೆ ಬಂದಾಗಿನಿಂದ ವಿದ್ಯುತ್ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗಿಲ್ಲ. ಇದು ಜನಸ್ನೇಹಿ ಸರ್ಕಾರದ ಸಾಧನೆಯಾಗಿದೆ ಎಂದು ಇಂಧನ ಖಾತೆ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಅವರು ಮಂಗಳವಾರ ಮಧ್ಯಾಹ್ನ ಧಾರವಾಡ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಇಂಧನ ಇಲಾಖೆಯ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ಜರುಗಿಸಿ ಮಾತನಾಡಿದರು.

ಇಂಧನ ಇಲಾಖೆಯು ಅಗತ್ಯವಿರುವ 1,500 ಜೆ.ಇ, ಎಇ ಮತ್ತು 3 ಸಾವಿರ ಲೈನ್‌ಮನ್‌ಗಳ ನೇಮಕಾತಿ ಮಾಡಿದೆ. ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಆಗಾಗ ವಿದ್ಯುತ್




ಕಡಿತ, ಕಡಿಮೆ ವೋಲ್ಟೇಜ್‌ನಂತಹ ಸಮಸ್ಯೆಗಳು ವರದಿಯಾಗುತ್ತಿದ್ದು, ಇವುಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಅಧಿಕಾರಿಗಳು ಮತ್ತು ಸಿಬ್ಬಂದಿ ನಡುವೆ ಉತ್ತಮ ಸಮನ್ವಯ ಇರಬೇಕು. ಯಾವುದೇ ಕಡತಗಳು ವಿಳಂಬವಾಗದಂತೆ ಕ್ರಮ ಕೈಗೊಳ್ಳಬೇಕು. ಜನರಿಗೆ ವಿದ್ಯುತ್ ಬಿಲ್ ಸಂಬಂಧಿತ ಸಮಸ್ಯೆಗಳು, ಹೊಸ ಸಂಪರ್ಕ ಪಡೆಯುವಲ್ಲಿನ ವಿಳಂಬ, ವಿದ್ಯುತ್ ಕಂಬಗಳು ಮತ್ತು ತಂತಿಗಳ ನಿರ್ವಹಣೆ, ಹಲವು ಸಣ್ಣ ಸಣ್ಣ ತೊಂದರೆಗಳು ಎದುರಾಗುತ್ತಿವೆ. ಅದಕ್ಕೆ ಸೂಕ್ತವಾದ ಕ್ರಮಗಳನ್ನು ವಹಿಸಬೇಕೆಂದು ಸಚಿವರು ಸೂಚಿಸಿದರು.

ಗ್ರಾಹಕ ಸೇವಾ ಕೇಂದ್ರಗಳನ್ನು ಇನ್ನಷ್ಟು ಬಲಪಡಿಸಬೇಕು ಮತ್ತು ಸಾರ್ವಜನಿಕರ ಕುಂದುಕೊರತೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಮುಂದಿನ ದಿನಗಳಲ್ಲಿ ಇಂಧನ ವಿತರಣಾ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸಲು ಮತ್ತು ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಲು ಕ್ರಮಕೈಗೊಳ್ಳುವುದಾಗಿ ಅವರು ಹೇಳಿದರು.

ಪ್ರಸಕ್ತ ಸಾಲಿನ ಮುಂಗಾರು ಮಳೆಗೆ ಧಾರವಾಡ ಜಿಲ್ಲೆಯ ವಿವಿಧ ಕಡೆ ವಿದ್ಯುತ್ ಕಂಬ, ಟಿಸಿ ಮತ್ತು ಇತರ ಪರಿಕರಗಳಿಗೆ ಹಾನಿಯಾಗಿದ್ದು, ಅಂದಾಜು 1.71 ಕೋಟಿ ಮೊತ್ತದ ಹಾನಿಯಾಗಿದೆ ಎಂದು ಸಚಿವರು ತಿಳಿಸಿದರು.

ಸಭೆಯಲ್ಲಿ ಶಾಸಕರಾದ ಎನ್.ಹೆಚ್. ಕೊನರಡ್ಡಿ, ಎಮ್.ಆರ್. ಪಾಟೀಲ, ಮಹೇಶ ಟೆಂಗಿನಕಾಯಿ ಮಾತನಾಡಿದರು. ವೇದಿಕೆಯಲ್ಲಿ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತಾ, ಕೆ.ಪಿ.ಟಿ.ಸಿ.ಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜಕುಮಾರ ಪಾಂಡೆ, ಹೆಸ್ಕಾಂ ಅಧ್ಯಕ್ಷ ಸೈಯದ್ ಅಜೀಮ್ ಫೀರ್ ಎಸ್.ಖಾದ್ರಿ, ಜಿಲ್ಲಾಧಿಕಾರಿ ದಿವ್ಯ ಪ್ರಭು, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶಾಕೀರ್ ಸನದಿ ಉಪಸ್ಥಿತರಿದ್ದರು.

ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ವೈಶಾಲಿ ಎಂ.ಎಲ್ ಸ್ವಾಗತಿಸಿ, ಸಭೆ ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್. ಪಾಟೀಲ, ಪ್ರೊಬೆಷನರಿ ಐಎಎಸ್ ಅಧಿಕಾರಿ ರಿತೀಕಾ ವರ್ಮಾ ಸೇರಿದಂತೆ ವಿವಿಧ ಜನಪ್ರತಿನಿಧಿಗಳು, ಹೆಸ್ಕಾಂ ಮತ್ತು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳು ಭಾಗವಹಿಸಿದ್ದರು.

> 2004ರಿಂದಲೂ ಅಭ್ಯಾಸವಾಗಿರುವ ಅನಧಿಕೃತ ವಿದ್ಯುತ್ ಸಂಪರ್ಕಗಳನ್ನು ಸಕ್ರಮಗೊಳಿಸಲು ನಿರ್ದಿಷ್ಟ ಮಾನದಂಡಗಳನ್ನು ಮಾಡಲಾಗಿದೆ. ಇದಕ್ಕಾಗಿ ಕುಸುಮ ಬಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗಿದೆ. 500 ಮೀ. ವ್ಯಾಪ್ತಿಯ ಹೊರಗಿರುವ ಪಂಪ್‌ಸೆಟ್ ವಿದ್ಯುತ್ ಸಂಪರ್ಕಗಳಿಗೆ ಈಗಾಗಲೇ ಶೇ. 60ರಷ್ಟು ಇರುವ ರಿಯಾಯಿತಿಯನ್ನು ಶೇ. 80ರಷ್ಟು ಹೆಚ್ಚಳ ಮಾಡಿ ಯಾವುದೇ ಅಕ್ರಮ, ಹೆಚ್ಚುವರಿ ಆರ್ಥಿಕ ವೆಚ್ಚವಾಗದಂತೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ ಎಂದು ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

### ಸ್ವಚ್ಛತೆಯ ನೆಪದಲ್ಲಿ ಗೂಡಂಗಡಿ ತೆರವು । ಕಣ್ಣೀರು ಸುರಿಸಿದ ಬಡ ವ್ಯಾಪಾರಸ್ಥರು

# ಹೊಟ್ಟೆಗೆ ತಣ್ಣೀರು ಬಟ್ಟೆ



■ವಿಜಯಸಾಕ್ಷಿ ಸುದ್ದಿ, ರೋಣ

ಒಂದೊತ್ತಿನ ಊಟಕ್ಕಾಗಿ ಪಟ್ಟಣದ ಬಸ್ ನಿಲ್ದಾಣದ ಬಳಿ ತಳ್ಳುಗಾಡಿ, ಗೂಡಂಗಡಿಗಳನ್ನಿಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದ ಹತ್ತಾರು ಬಡ ಕುಟುಂಬಗಳು ಬೀದಿಗೆ ಬಂದು ನಿಂತಿರುವ ಘಟನೆ ಮಂಗಳವಾರ ನಡೆದಿದೆ.

ಮಂಗಳವಾರ ಪುರಸಭೆಯ ಉಪಾಧ್ಯಕ್ಷ ಹನ್ಮಂತಪ್ಪ ತಳ್ಳಿಕೇರಿ ಮತ್ತು ಪುರಸಭೆಯ ಸಿಬ್ಬಂದಿಗಳು ಏಕಾಏಕಿ ಬಸ್ ನಿಲ್ದಾಣದ ಬಳಿ ಜೆಸಿಬಿ ಯಂತ್ರವನ್ನು ತಂದು, ಸ್ವಚ್ಛತೆಯ ನೆಪವೊಡ್ಡಿ ಸಣ್ಣಪುಟ್ಟ ಅಂಗಡಿಗಳನ್ನು ಇಟ್ಟುಕೊಂಡಿದ್ದ ಹತ್ತಾರು ಕುಟುಂಬಗಳನ್ನು ಬೀದಿಗೆ ತಳ್ಳಿದ್ದಾರೆ. ಇದರಿಂದ ಗೊಂದಲಕ್ಕೀಡಾದ ಸಣ್ಣ ವ್ಯಾಪಾರಸ್ಥರು ಹಿಂಗ್ ಬಂದ್ ಅಂಗಡಿ ತೆಗಿ ಅಂದ್ರ ಹ್ಯಾಂಗ್ರೀ, ನಮಗ ವ್ಯಾಪಾರ ಬಿಟ್ರ ಮತ್ತೇನು ಇಲ್ಲ, ನಿತ್ಯ ದುಡಿದು ಜೀವನ ನಡೆಸ್ತಿವ್ರೀ ಎಂದು ತಮ್ಮ ಅಳಲು ತೋಡಿಕೊಂಡರು.

ಅಂಜುಮನ್ ಸಂಸ್ಥೆಯ ಅಧ್ಯಕ್ಷ ಹಾಗೂ ಪುರಸಭೆಯ ಸದಸ್ಯರು ಸ್ಥಳಕ್ಕೆ ಆಗಮಿಸಿ, ಮೊದಲು ವ್ಯಾಪಾರಸ್ಥರಿಗೆ ನೋಟಿಸ್ ನೀಡಿ ನಂತರ ತೆರವು ಕಾರ್ಯ ಮಾಡಬೇಕಿತ್ತು. ಅಲ್ಲದೆ ಅವರೆಲ್ಲರೂ ಶ್ರೀಮಂತರಲ್ಲ. ಹೊಟ್ಟೆಪಾಡಿಗಾಗಿ ಸಣ್ಣಪುಟ್ಟ ವ್ಯಾಪಾರ ಮಾಡುತ್ತ ತಮ್ಮ ದೈನಂದಿನ ಬದುಕು ನಡೆಸುತ್ತಿದ್ದಾರೆ. ಹೀಗೆ ಏಕಾಏಕಿ ಬಂದು ಅಂಗಡಿ ತೆರವು ಮಾಡಿದರೆ ಹೇಗೆ ಎಂದು ಉಪಾಧ್ಯಕ್ಷ ಹನ್ಮಂತಪ್ಪ ತಳ್ಳಿಕೇರಿ ಮತ್ತು ಸಿಬ್ಬಂದಿಗಳನ್ನು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಉಪಾಧ್ಯಕ್ಷರು, ಇದಕ್ಕೆ ನಾನು ಕಾರಣವಲ್ಲ. ರಸ್ತೆ ಅಗಲೀಕರಣವಾಗಲಿದ್ದು, ಅಂಗಡಿಗಳನ್ನು ತೆರವುಗೊಳಿಸಿ ಎಂದು ಮುಖ್ಯಾಧಿಕಾರಿಗಳು ಸೂಚಿಸಿದ್ದಾರೆ ಎನ್ನುತ್ತಿದ್ದಂತೆ, ಸದಸ್ಯ ಬಾವಾಸಾಬ ಬೆಟಗೇರಿ, ಅವರು ಬಡವರು. ಮುಂಚಿತವಾಗಿ ಮಾಹಿತಿ ನೀಡದೇ ಮುಖ್ಯಾಧಿಕಾರಿಗಳು ಇಂತಹ ಕ್ರಮ ತೆಗೆದುಕೊಂಡಿದ್ದು ಸರಿಯಲ್ಲ. ಬಡವರ ಜೀವನದ ಜೊತೆಗೆ ಚೆಲ್ಲಾಟವಾಡುವುದು ಉಚಿತವಲ್ಲ. ಅವರಿಗೆ ವ್ಯಾಪಾರ ನಡೆಸಲು ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

> ಈ ಹಿಂದ ರಸ್ತೆ ಅಗಲೀಕರಣ ಮಾಡುತ್ತೇವೆಂದು ಅಂಗಡಿ ಕಿತ್ತರು. ಎರಡು ವರ್ಷವಾದರೂ ಏನೂ ಮಾಡಿಲ್ಲ. ಈಗ ಪುನಃ ಬಂದಿದ್ದಾರೆ. ನಮ್ಮದೇನೂ ದೊಡ್ಡ ಅಂಗಡಿ ಅಲ್ಲ. ಸಣ್ಣ ಪುಟ್ಟ ವ್ಯಾಪಾರ ಮಾಡಿ ಜೀವನದ ಬಂಡಿ ನಡೆಸಿದ್ದೇವೆ. ಹೀಗೆ ನಮ್ಮ ಹೊಟ್ಟೆಯ ಮೇಲೆ ಹೊಡೆಯುವುದು ಯಾವ ನ್ಯಾಯ ಎಂದು ವ್ಯಾಪಾರಸ್ಥರು ಕಣ್ಣೀರು ಹಾಕಿದರು.

# ನೂತನ ಕಟ್ಟಡದ ಅಡಿಗಲ್ಲು ಸಮಾರಂಭ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ ನಗರದ ಹುಬ್ಬಳ್ಳಿ ರಸ್ತೆಯಲ್ಲಿರುವ ಕೆಪಿಟಿಸಿಎಲ್ 220 ಕೆ.ವಿ. ಸ್ಟೇಷನ್ ಆವರಣದಲ್ಲಿ ಗದಗ ಜಿಲ್ಲಾ ಕೇಂದ್ರದ ಕಾರ್ಯ ಮತ್ತು ಪಾಲನಾ ವೃತ್ತ ಕಚೇರಿಯ ನೂತನ ಕಟ್ಟಡದ ಅಡಿಗಲ್ಲು ಸಮಾರಂಭ ಸೆಪ್ಟೆಂಬರ್ 10 ರಂದು ಬೆಳಿಗ್ಗೆ 10 ಘಂಟೆಗೆ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದಲ್ಲಿ ಘನ ಉಪಸ್ಥಿತಿ ವಹಿಸುವರು.

ಇಂಧನ ಸಚಿವ ಕೆ.ಜೆ. ಜಾರ್ಜ್ ಅಡಿಗಲ್ಲು ಸಮಾರಂಭ ನೆರವೇರಿಸುವರು. ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಕೆ.ಪಾಟೀಲ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾವೇರಿ ಸಂಸದ ಬಸವರಾಜ್ ಬೊಮ್ಮಾಯಿ, ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಕರ್ನಾಟಕ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ರೋಣ ಶಾಸಕರಾದ ಜಿ.ಎಸ್.ಪಾಟೀಲ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಅಧ್ಯಕ್ಷ ಸೈಯದ್ ಅಜೀಮಪೀರ್ ಎಸ್ ಖಾದ್ರಿ, ಸಂಸದ ಪಿ.ಸಿ.ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ.ಸಂಕನೂರ, ಪ್ರದೀಪ್ ಶೆಟ್ಟರ್, ಶಾಸಕರಾದ ಸಿ.ಸಿ.ಪಾಟೀಲ, ಡಾ.ಚಂದ್ರು ಲಮಾಣಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಅಕಬರಸಾಬ ಬಬರ್ಚಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕ.ವಿ.ಪ್ರ.ನಿ.ನಿ ವ್ಯವಸ್ಥಾಪಕ ನಿರ್ದೇಶಕರಾದ ಪಂಕಜ್ ಕುಮಾರ್ ಪಾಂಡೆ, ಕರ್ನಾಟಕ ಯೋಜನೆ ಕಾರ್ಯಕ್ರಮ ಸಂಯೋಜನೆ ಮತು ಸಾಂಖ್ಯಿಕ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ್ ಚೌಧರಿ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಹುಬ್ಬಳ್ಳಿ ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ಶ್ರೀಮತಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಹುಬ್ಬಳ್ಳಿ ಹೆಸ್ಕಾಂ ನಿರ್ದೇಶಕ ( ತಾಂತ್ರಿಕ) ಎಸ್.ಜಗದೀಶ್, ಹುಬ್ಬಳ್ಳಿ ಹೆಸ್ಕಾಂ ನಿರ್ದೇಶಕ( ಹಣಕಾಸು) ಪ್ರಕಾಶ ಪಾಟೀಲ, ಹೆಸ್ಕಾಂ ಕಾರ್ಯ ಮತ್ತು ಪಾಲನಾ ವಲಯ ( ವಿದ್ಯುತ್ ) ಮುಖ್ಯ ಇಂಜಿನಿಯರ್ ದೀಪಕ್ ಬಾಬು ಕಾಮತ ಆಗಮಿಸಲಿದ್ದಾರೆ

ಗದಗ ಹೆಸ್ಕಾಂದ (ವಿದ್ಯುತ್ ) ಕಾರ್ಯ ಮತ್ತು ಪಾಲನಾ ವೃತ್ತದ ಅಧೀಕ್ಷಕ ಇಂಜನೀಯರ್ ಶ್ರೀಮತಿ ನಜ್ಮುನ್ನಿಸ ಕೆ. ಅಲ್ಲಾವಲಿ, ಹುಬ್ಬಳ್ಳಿ ಹೆಸ್ಕಾಂದ ಅಧೀಕ್ಷಕ ಇಂಜಿನಿಯರ್ ( ಸಿವಿಲ್) ತಿಪ್ಪಣ್ಣ ಮಾದರ್, ಹುಬ್ಬಳ್ಳಿ ಹೆಸ್ಕಾಂ ದ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಇಂಜನೀಯರ್ ರಾಜೇಂದ್ರ ಕೋರೆ, ಗದಗ ಹೆಸ್ಕಾಂದ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಇಂಜನೀಯರ್ ರಾಜೇಶ ಕಲ್ಯಾಣಶೆಟ್ಟಿ, ರೋಣ ಹೆಸ್ಕಾಂ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ವಾಸನ್ ಎಸ್ ಎಲ್ ಸ್ವಾಗತ ಕೋರಿದ್ದಾರೆ.

# ಪಂ. ಪುಟ್ಟರಾಜರ ಆದರ್ಶಗಳನ್ನು ಪಾಲಿಸಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಡಾ. ಪಂಡಿತ ಪುಟ್ಟರಾಜ ಗವಾಯಿಗಳು ತಮ್ಮ ಸಂಗೀತ ಸೇವೆಯ ಮೂಲಕವೇ ಅಂಧ, ಅನಾಥ ಮಕ್ಕಳ ಪಾಲನೆ, ಪೋಷಣೆ, ಸಂಗೀತ, ಶಿಕ್ಷಣ, ಸಂಸ್ಕಾರ ದೀಕ್ಷೆ ನೀಡಿ ಅವರ ಬಾಳಿನ ನಂದಾದೀಪವೇ ಆಗಿದ್ದಾರೆ. ಅವರ ಸ್ಮರಣೆ ಮಾಡುವ ಮೂಲಕ ಅವರ ಆದರ್ಶಗಳನ್ನು ಜೀವನದಲ್ಲಿ ಪಾಲಿಸಬೇಕು ಎಂದು ಮಣಕವಾಡದ ಶ್ರೀ ಅಭಿನವ ಮೃತ್ಯುಂಜಯ ಮಹಾಸ್ವಾಮಿಗಳು ನುಡಿದರು.

ಅವರು ಪಟ್ಟಣದ ಕದರಗೇರಿ ಓಣಿಯಲ್ಲಿ ಪಂ.ಪುಟ್ಟರಾಜ ಕವಿ ಗವಾಯಿಗಳ ಹಾಗೂ ಮಣಕವಾಡ ಮೃತ್ಯುಂಜಯ ಮಹಾಸ್ವಾಮಿಗಳ ಪುಣ್ಯಸ್ಮರಣೋತ್ಸವದ ನಿಮಿತ್ತ ಏರ್ಪಡಿಸಿದ್ದ ನುಡಿ ನಮನ ಮತ್ತು ಅನ್ನಸಂತರ್ಪಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಪುಟ್ಟಯ್ಯಜ್ಜನವರು ಚಿಕ್ಕ ವಯಸ್ಸಿನಲ್ಲಿಯೇ ಶಿಕ್ಷಣಕ್ಕಾಗಿ ಪಂ.ಪಂಚಾಕ್ಷರಿ ಗವಾಯಿಗಳ ಆಶ್ರಮಕ್ಕೆ ಸೇರಿದ ಮೇಲೆ ಅಲ್ಲಿ ಗುರುಗಳ ಮಾರ್ಗದರ್ಶನದಲ್ಲಿ ಶ್ರೀಮಠವನ್ನು ಬೆಳೆಸುವ ಕಾರ್ಯ ಮಾಡಿದ್ದರು. ಪಂಡಿತ ಪಂಚಾಕ್ಷರಿ ಗವಾಯಿ ನಾಟಕ ರಂಗಮಂದಿರವನ್ನು ಸಂಘಟಿಸಿ ಸ್ಥಾಪಿಸಿದ ಪುಟ್ಟರಾಜ ಗವಾಯಿಯವರು ನಾಟಕ ಕಂಪನಿಯು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ ಸಾವಿರಾರು ರಂಗ ಕಲಾವಿದರನ್ನು ನಾಡಿಗೆ ನೀಡಿದ ಕೀರ್ತಿ ಹೊಂದಿದ್ದಾರೆ. ಗದಗಿನ ವೀರೇಶ್ವರ ಪುಣ್ಯಾಶ್ರಮವು ಕರ್ನಾಟಕದ ಅತ್ಯಂತ ಜನಪ್ರಿಯ ಮತ್ತು ಪ್ರಭಾವಶಾಲಿ ಆಶ್ರಮವಾಗಿದ್ದು, ಇದು ಪುಟ್ಟರಾಜ ಗವಾಯಿಗಳ ಶ್ರಮ ಮತ್ತು ಸಾಧನೆಯ ಪ್ರತೀಕವಾಗಿದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಸಾಹಿತಿ ಪೂರ್ಣಾಜಿ ಕರಾಟೆ ಮಾತನಾಡಿದರು. ದೇವಪ್ಪ ಮಲ್ಲೂರ ಅಧ್ಯಕ್ಷತೆ ವಹಿಸಿದ್ದರು. ಹಿರಿಯರಾದ ಬಸವರಾಜ ಲಕ್ಕುಂಡಿ, ಈರಪ್ಪ ಹಾದಿಮನಿ, ಪುಲಕೇಶಿ ಬಟ್ಟೂರ, ಯಲ್ಲಪ್ಪ ಅಡರಕಟ್ಟಿ, ರಾಮಣ್ಣ ಲಿಂಗಶೆಟ್ಟಿ, ವೈ.ಕೆ. ಲಿಂಗಶೆಟ್ಟಿ, ಮಹಾದೇವಪ್ಪ ಗಿಡಿಬಿಡಿ, ಶಿವಜೋಗೆಪ್ಪ ಚಂದರಗಿ, ಗಂಗಾಧರ ಶಿರಗಣ್ಣವರ, ಪಾರಮ್ಮ ಲಿಂಗಶೆಟ್ಟಿ, ಆನಂದ ಲಿಂಗಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು. ಶಿವರುದ್ರಮ್ಮದೇವಿ ಟ್ರಸ್ಟ್ ಕಮಿಟಿ ಅಧ್ಯಕ್ಷ ಸೋಮೇಶ ಉಪನಾಳ ನಿರ್ವಹಿಸಿದರು.

# ಜಿಲ್ಲಾ ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

▶▶ಮೊದಲನೇ ಪುಟದಿಂದ

ಮತ್ತು ಮಕ್ಕಳ ಕಲ್ಯಾಣ ಸಮಿತಿ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಸಂಜೆ 5.30 ಗಂಟೆಗೆ ವಾರ್ಡ್ ನಂ.18 ರಲ್ಲಿ ಗೌರವ ಘಟಕದ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಸಂಜೆ 6 ಗಂಟೆಗೆ ವಾರ್ಡ್ ನಂ.30 ರ ವಾಂಬೆ ಬಡಾವಣೆಯಲ್ಲಿ ರಾಜ ಕಾಲುವೆ ಕಾಮಗಾರಿಯ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಸಂಜೆ 6.30 ರಿಂದ 7.30 ಗಂಟೆಯವರೆಗೆ ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿಗೆ ಭೇಟಿ ನೀಡುವರು. ರಾತ್ರಿ 8.30 ಗಂಟೆಗೆ ಗದಗನಿಂದ ರಸ್ತೆ ಮೂಲಕ ಹುಬ್ಬಳ್ಳಿಗೆ ಪ್ರಯಾಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

# ರಾಷ್ಟ್ರೀಯ ಲಾಂಛನ ವಿರೂಪ ಪ್ರಕರಣ: ಹಜರತ್ಬಲ್‌ನಲ್ಲಿ 30ಕ್ಕೂ ಹೆಚ್ಚು ಬಂಧನ; "ಕಾಶ್ಮೀರಿಗಳ ಹತ್ಯಾಕಾಂಡ" ಎಂದ ಸಂಸದ

■ವಿಜಯಸಾಕ್ಷಿ ಸುದ್ದಿ, ಶ್ರೀನಗರ

ಶ್ರೀನಗರದ ಅತ್ಯಂತ ಪೂಜ್ಯ ಧಾರ್ಮಿಕ ಸ್ಥಳಗಳಲ್ಲಿ ಒಂದಾದ ಹಜರತ್ಬಲ್ ದರ್ಗಾದಲ್ಲಿ, ಹೊಸದಾಗಿ ಅಳವಡಿಸಲಾದ ಫಲಕದ ಮೇಲೆ ರಾಷ್ಟ್ರೀಯ ಲಾಂಛನವನ್ನು ವಿರೂಪಗೊಳಿಸಿದ ಘಟನೆಯು ಭಾರೀ ರಾಜಕೀಯ ವಿವಾದಕ್ಕೆ ಕಾರಣವಾಗಿದೆ.

ಈ ಘಟನೆ ನಡೆದ ನಂತರ, ಪೊಲೀಸರು 30ಕ್ಕೂ ಹೆಚ್ಚು ಜನರನ್ನು ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ವರದಿಯಾಗಿದೆ.

# ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಗದಗ ವಿಭಾಗೀಯ ಕಚೇರಿಯಲ್ಲಿ ಐಟಿಐ ಕೋಪಾ ವೃತ್ತಿಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಒಂದು ವರ್ಷದ ಶಿಶಿಕ್ಷ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು www.apprenticeshipindia.gov.in ನಲ್ಲಿ ನೊಂದಣಿ ಮಾಡಿಕೊಂಡು ಸದರಿ ಪೋರ್ಟಲ್ ನಿಂದ Divisional Controller NWKARTC GADAG DIVISION (EO 4162900081) ಈ ವಿಳಾಸಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ವಿಭಾಗೀಯ ಕಚೇರಿ, ವಾ.ಕ.ರ.ಸಾ.ಸಂಸ್ಥೆ, ಗದಗ ವಿಭಾಗ" ಇಲ್ಲಿ ಸೆಪ್ಟೆಂಬರ್ 17 ರಂದು ಬೆಳಿಗ್ಗೆ 11-00 ಘಂಟೆಗೆ ಕಚೇರಿ ವೇಳೆಯಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಸ್ವಂತ ಖರ್ಚಿನಲ್ಲಿ ನೇರ ಸಂದರ್ಶನಕ್ಕೆ ಹಾಜರಾಗಬೇಕೆಂದು ವಾ.ಕ.ರ.ಸಾ.ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಲಕ್ಷ ದೀಪೋತ್ಸವ ಕಾರ್ಯಕ್ರಮದಲ್ಲಿ ಡಾ. ಕೊಟ್ಟೂರು ಶಿವಾಚಾರ್ಯ ಶ್ರೀಗಳು ಅಭಿಮತ

# ಧರ್ಮಾಭಿಮಾನ, ದೇಶಾಭಿಮಾನಕ್ಕೆ ಪ್ರೇರಣೆಯಾಗಲಿ

■ವಿಜಯಸಾಕ್ಷಿ ಸುದ್ದಿ, ಗದಗ

ದೇಹಾಭಿಮಾನ, ಧನಾಭಿಮಾನ ಶಾಶ್ವತವಲ್ಲ ಎನ್ನುವುದನ್ನು ಅರಿತು ಧರ್ಮಾಭಿಮಾನ ಮತ್ತು ದೇಶಾಭಿಮಾನ ಬೆಳೆಸುವಲ್ಲಿ ಹಿಂದೂ ಮಹಾಗಣಪತಿಯ ಪ್ರೇರಣೆ ಸರ್ವರಲ್ಲಿ ಒಡಮೂಡಲಿ ಎಂದು ಸೂಡಿ ಜುಕ್ತಿಹಿರೇಮಠದ ಡಾ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಶ್ರೀಗಳು ಹೇಳಿದರು.

ಅವರು ಮಂಗಳವಾರ ಸಂಜೆ ಗದಗ ನಗರದ ವೀರಶೈವ ಲೈಬ್ರರಿಯ ಬಳಿಯಲ್ಲಿ ಶ್ರೀ ಸುದರ್ಶನಚಕ್ರ ಯುವಕ ಮಂಡಳಿ ವತಿಯಿಂದ ಪ್ರತಿಷ್ಠಾಪಿಸಿ 21 ದಿನಗಳ ಕಾಲ ಪೂಜಿಸಲ್ಪಡುವ ಹಿಂದೂ ಮಹಾಗಣಪತಿ ಸನ್ನಿಧಿಯಲ್ಲಿ ಆಯೋಜಿಸಲಾಗಿದ್ದ ಲಕ್ಷ ದೀಪೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ದೀಪ ಜ್ಞಾನದ ಸಂಕೇತವಾಗಿದ್ದು, ನಮ್ಮಲ್ಲಿರುವ ಅಜ್ಞಾನ ಕಳೆದು ಸುಜ್ಞಾನದೆಡೆಗೆ ಬೆಳಕಿನೆಡೆಗೆ ಕರೆದೊಯ್ಯುತ್ತದೆ. ಭಕ್ತರು ಗಣಪತಿಯ ಗುಣಗಳನ್ನು ತಮ್ಮಲ್ಲಿ ಕಲ್ಪಿಸಿಕೊಳ್ಳುವ ಮೂಲಕ ಬದುಕಿನಲ್ಲಿ ಅಧ್ಯಾತ್ಮಕತೆ ಅಳವಡಿಸಿಕೊಂಡು ಬದಲಾವಣೆ ಕಾಣಬೇಕಿದೆ. ಭಗವಂತನೆಡೆಗೆ ನಮ್ಮ ಒಂದು ಹೆಜ್ಜೆ ಮಾನವ ಬದುಕು ಸಾಕಾರಕ್ಕೆ ಸಹಕಾರಿಯಾಗಲಿದೆ. ನಗರದಲ್ಲಿ ಹಿಂದೂ ಮಹಾಗಣಪತಿಯ ಪ್ರತಿಷ್ಠಾಪನೆಯ ಮೂಲಕ ನಮ್ಮ ಸಂಸ್ಕೃತಿ, ಸಂಪ್ರದಾಯ ಎತ್ತಿ ಹಿಡಿಯುವ ಕಾರ್ಯ ಪ್ರಸಂಶನೀಯವಾಗಿದೆ ಎಂದರು.



ಇಂದು ನಗರದಲ್ಲಿ ನಡೆದ ಲಕ್ಷ ದೀಪೋತ್ಸವ ದೇಶದ ಜನರಲ್ಲಿ ತುಂಬಿರುವ ಅಜ್ಞಾನ ತೊಲಗಿಸಲು ಮತ್ತು ನಾಡಿನ ಸಮೃದ್ಧಿಗೆ ಸಹಕಾರಿಯಾಗಿದ್ದು, ಒಟ್ಟಾರೆ ನಗರದಲ್ಲಿ ಇಂದೆ ಮುಂಬರುವ ದೀಪಗಳ ಹಬ್ಬ ದೀಪಾವಳಿಗೆ ಚಾಲನೆ ದೊರತಂತಾಗಿದ್ದು, ಲಕ್ಷ ದೀಪೋತ್ಸವದ ಬೆಳಕಿನ ಛಾಯೆಗಳು



ಸರ್ವರಲ್ಲಿ ಸಮೃದ್ಧಿ, ಸಂಪ್ರೀತಿ ಬೆಳೆಯಲು ಪ್ರೇರಕವಾಗಲಿ ಎಂದರು.

> ನಮ್ಮದು ಸಿಂಧೂ ನಾಗರಿಕತೆಯಾಗಿದೆ. ನಮ್ಮ ಸಂಸ್ಕೃತಿ ಮಾತ್ರ ಗಟ್ಟಿಭಾವ ಹೊಂದಿದೆ. ಇತ್ತೀಚೆಗೆ ಇತರೆ ದೇಶಗಳಲ್ಲಿ ಸಂಸ್ಕೃತಿ, ನಾಗರಿಕತೆ ನಾಶವಾಗುತ್ತಿದ್ದು, ದೇಶದ ಪರಂಪರೆ ಬೆಳೆಸುವ ಹೊಣೆಗಾರಿಕೆಯನ್ನು ಧರ್ಮಾಭಿಮಾನಿಗಳು ಹೊರಬೇಕಿದೆ. ಭಾರತ ಮಹಾತ್ಮರು, ಸಾಧು, ಸಂತರ ನಾಡಾಗಿದ್ದು, ಇಲ್ಲಿ ಮಹಾಜ್ಞಾನಿಗಳು, ಮಹಾತ್ಮರು ಜನ್ಮ ತಳೆಯುವ ಮೂಲಕ ಭಾರತ ಭೂಮಿಯನ್ನು ಪವಿತ್ರಗೊಳಿಸಿದ್ದಾರೆ. ದೇವಾನುದೇವತೆಗಳು ಜನ್ಮ ತಳೆದ ಸರ್ವಶ್ರೇಷ್ಠ ಪವಿತ್ರ ಭೂಮಿ ನಮ್ಮದಾಗಿದೆ. ನಮ್ಮ ಸಂಸ್ಕೃತಿ, ಆಚಾರ, ವಿಚಾರಗಳನ್ನು ಸರ್ವರೂ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಿದೆ.
> **- ಡಾ. ಕೊಟ್ಟೂರು ಶಿವಾಚಾರ್ಯ ಶ್ರೀಗಳು.**

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka